2018 ಕ.ತೀ.ವ 1661

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

### ಮಹದೇವ -ವಿರುದ್ಧ- ಕರ್ನಾಟಕ ರಾಜ್ಯ*

ದಂಡ ಪ್ರಕ್ರಿಯಾ ಸಂಹಿತೆಯ 374(2)ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅಪೀಲು.

ಭಾರತ ದಂಡ ಸಂಹಿತೆ 84ನೇ ಪ್ರಕರಣ.

ಅಪೀಲುದಾರನಾದ, ಮುನಿಶೆಟ್ಟಿಯವರ ಮಗನಾದ ಆಪಾದಿತ ಮಹಾದೇವನು, ಎಸ್.ಸಿ. ಸಂ.13/2010ರಲ್ಲಿ ಕೊಳ್ಳೆಗಾಲದ ತ್ವರಿತ ನ್ಯಾಯಾಲಯದ ಸೆಷನ್ಸ್ ನ್ಯಾಯಾಧೀಶರು ಮತ್ತು ಪ್ರಿಸೈಡಿಂಗ್ ಅಧಿಕಾರಿಯವರು, ಭಾರತ ದಂಡ ಸಂಹಿತೆಯ 302 ಮತ್ತು 309ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಅಪರಾಧ ನಿರ್ಣೀತನಾಗಿದ್ದು, ಅವನಿಗೆ ಕಠಿಣ ಕಾರಾವಾಸ ಶಿಕ್ಷೆಯನ್ನು ವಿಧಿಸಿ, 50,000/- ರೂ.ಗಳ ಜುಲ್ಮಾನೆಯನ್ನು ವಿಧಿಸಲಾಗಿದ್ದು, ತಪ್ಪಿದಲ್ಲಿ ಐದು ತಿಂಗಳುಗಳ ಅವಧಿಯ ಹೆಚ್ಚಿನ ಕಾರಾವಾಸ ಶಿಕ್ಷೆಗೊಳಪಡಿಸಲು ಮತ್ತು ದಿನಾಂಕ 5/11.07.2014ರ ತೀರ್ಪು ಮತ್ತು ಆದೇಶದ ಮೂಲಕ ಆರು ತಿಂಗಳುಗಳ ಅವಧಿಗೆ ಸಾದಾ ಕಾರಾವಾಸ ಶಿಕ್ಷೆಗೂ ಸಹ ಒಳಪಡಿಸಲಾಗಿತ್ತು. ಇದನ್ನು ಪ್ರಶ್ನಿಸಿರುವ ಇವನು ಪ್ರಸ್ತುತ ಅಪೀಲನ್ನು ಹೂಡಿದ್ದಾನೆ.

ಪ್ರಕರಣದ ಗುಣಾವಗುಣಗಳನ್ನು ಗಮನಿಸುವ ಮೊದಲು, ಪ್ರಾಸಿಕ್ಯೂಷನ್‌ನ ಮೊಕದ್ದಮೆಯ ಸಂಕ್ಷಿಪ್ತವಾದ ಸಂಗತಿಗಳನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ.

*ಕ್ರಿಮಿನಲ್ ಅಪೀಲು ಸಂ: 979/2014, ದಿನಾಂಕ 20ನೇ ಜುಲೈ, 2018.

ದಿನಾಂಕ 01.10.2009 ರಂದು ರಾತ್ರಿಯ ಊಟವನ್ನು ಮುಗಿಸಿದ ನಂತರ ಆಪಾದಿತನು, ಮಗಳಾದ ಜ್ಯೋತಿ ಮತ್ತು ಅವನ ತಾಯಿ ಮಾರಮ್ಮಳನ್ನು ಮನೆಯೊಳಗೆ ಬಂದರೆ ಅವನು ಅವರ ಕಾಲುಗಳನ್ನು ಕತ್ತರಿಸುವುದಾಗಿ ಹೆದರಿಸುವ ಮೂಲಕ ಹೊರಗಡೆ ಮಲಗಲು ಬಲವಂತಪಡಿಸಿದ್ದಾನೆ, ಅಷ್ಟೇ ಅಲ್ಲದೆ, ಆಪಾದಿತನು ತನ್ನ ಪತ್ನಿಯಾದ ಮೃತ ಜಯಮ್ಮಳ ಶೀಲವನ್ನು ಶಂಕಿಸುತ್ತಿದ್ದನೆಂಬುದು ಪ್ರಾಸಿಕ್ಯೂಷನ್‌ನ ವಾದವಾಗಿದೆ. ಜಯಮ್ಮಳು ಮನೆಯ ಒಳಗಡೆ ರಾತ್ರಿ ಸುಮಾರು 8.30ರಲ್ಲಿ ನಿದ್ದೆಹೋದಾಗ, ಮಚ್ಚಿನಿಂದ ಅವನು ಅವಳ ಕತ್ತನ್ನು ಕತ್ತರಿಸಿದ್ದು ಆ ಮೂಲಕ ತನ್ನ ಹೆಂಡತಿಯಾದ ಜಯಮ್ಮಳ ಕೊಲೆ ಮಾಡಿದ್ದಾನೆ. ಇದಾದ ನಂತರ ಅವನು ವಿಷವನ್ನು ಕುಡಿದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಾನೆ. ಹೀಗೆ ಭಾರತ ದಂಡ ಸಂಹಿತೆಯ 302 ಮತ್ತು 309ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಅಪರಾಧ ಸಂ.126/2009ರಲ್ಲಿ ಪ್ರಕರಣವನ್ನು ದಾಖಲಿಸಲಾಗಿತ್ತು. ತನಿಖೆಯನ್ನು ಪೂರ್ಣಗೊಳಿಸಿದ ನಂತರ, ಆರೋಪಿತನ ವಿರುದ್ಧ ಆರೋಪ ಪಟ್ಟಿಯನ್ನು ದಾಖಲಿಸಲಾಗಿತ್ತು. ಇದಾದನಂತರ, ಅಧಿವಿಚಾರಣಾ ನ್ಯಾಯಾಲಯವು, ಪ್ರಕರಣವನ್ನು ಸೆಷನ್ಸ್ ನ್ಯಾಯಾಲಯಕ್ಕೆ ಒಪ್ಪಿಸಿದ್ದು, ಸೆಷನ್ಸ್ ನ್ಯಾಯಾಲಯವು ಸಂಜ್ಞೇಯತೆಯನ್ನು ತೆಗೆದುಕೊಂಡು, ಮಾನ್ಯ ಸರ್ಕಾರಿ ಅಭಿಯೋಜಕರು ಮತ್ತು ಆಪಾದಿತನ ಮಾನ್ಯ ವಕೀಲರ ವಾದಗಳನ್ನು ಆಲಿಸಿದ ತರುವಾಯ, ಆರೋಪವನ್ನು ಸಿದ್ಧಪಡಿಸಿದ್ದು ಅದನ್ನು ಓದಲಾಗಿದ್ದು, ಆಪಾದಿತನಿಗೆ ವಿವರಿಸಲಾಗಿದೆ. ಆಪಾದಿತನು ತಾನು ತಪ್ಪಿತಸ್ಥನಲ್ಲವೆಂದು ವಾದಿಸಿದ್ದು, ಅಧಿವಿಚಾರಣೆ ಮಾಡಲು ಕ್ಲೇಮು ಮಾಡಿದ್ದು, ಹೀಗೆ ಅಧಿವಿಚಾರಣೆಯನ್ನು ನಿಗದಿಪಡಿಸಲಾಗಿತ್ತು.

ತನ್ನ ವಾದವನ್ನು ರುಜುವಾತುಪಡಿಸುವ ಸಲುವಾಗಿ, ಪ್ರಾಸಿಕ್ಯೂಷನ್ನು 16 ಜನ ಸಾಕ್ಷಿದಾರರನ್ನು ವಿಚಾರಣೆಮಾಡಿದ್ದು, ಉಪ-ಗುರುತುಗಳನ್ನು ಮಾಡುವುದರ ಜೊತೆಗೆ 26 ನಿಶಾನೆಗಳನ್ನು, 10 ಮುದ್ದೆಮಾಲುಗಳನ್ನು ಗುರುತು ಮಾಡಲಾಗಿದೆ. ಇದಾದ ತರುವಾಯ, ಅಪರಾಧಕ್ಕೆ ಸಿಕ್ಕಿಸುವ ಆಧಾರದ ಮೇಲೆ ಪ್ರಶ್ನಾವಳಿಗಳನ್ನು ಸಿದ್ಧಪಡಿಸುವ ಮೂಲಕ ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಮೇರೆಗೆ ಆಪಾದಿತನ ಹೇಳಿಕೆಯನ್ನು ದಾಖಲಿಸಲಾಗಿತ್ತು, ಆಪಾದಿತನು ಇದನ್ನು ನಿರಾಕರಿಸಿದ್ದು, ಇದಾದನಂತರ, ಅವರು, ವೈದ್ಯರನ್ನು ಪ್ರತಿವಾದಿ ಸಾಕ್ಷ್ಯ 1 ಎಂದು ವಿಚಾರಣೆಗೊಳಪಡಿಸಿ

ನಿಶಾನೆ ಡಿ1 ಎಂದು ಗುರುತು ಹಾಕಲಾಯಿತು. ಪಕ್ಷಕಾರರಿಬ್ಬರ ಪರವಾಗಿ ಹಾಜರಾಗಿದ್ದ ಮಾನ್ಯ ವಕೀಲರ ವಾದವನ್ನು ಆಲಿಸಿದ ನಂತರ ಅಧಿವಿಚಾರಣಾ ನ್ಯಾಯಾಲಯವು, ಪ್ರಾಸಿಕ್ಯೂಷನ್‌ನ ವಾದವನ್ನು ರುಜುವಾತುಪಡಿಸಲು ಸಾಕಷ್ಟು ಸಾಕ್ಷ್ಯಾಧಾರಗಳಿವೆಯೆಂಬ ನಿರ್ಣಯಕ್ಕೆ ಬಂದಿದ್ದು, ಅಂತಿಮವಾಗಿ, ಮೇಲೆ ಹೇಳಲಾದ ಅಪರಾಧಗಳಿಗಾಗಿ ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಿತು.

ಅಪೀಲು ಮೆಮೊದಲ್ಲಿ ಒತ್ತಾಯಪಡಿಸಲಾದ ಆಧಾರಗಳಂದಷ್ಟೇ ಅಲ್ಲದೆ, ದಾಖಲೆಯಲ್ಲಿರುವ ನಮ್ಮ ಮುಂದೆ ಮಂಡಿಸುವ ಸಾಕ್ಷ್ಯದ ಮೂಲಕ ಮಾನ್ಯ ನ್ಯಾಯಾಲಯ ಮಿತ್ರ ಇವರು  ಎಲ್ಲಾ ಯುಕ್ತ ಸಂದೇಹಗಳನ್ನು ಮೀರಿ ಆಪಾದಿತನ ತಪ್ಪನ್ನು ಮನಗಾಣಿಸಲು ಪ್ರಾಸಿಕ್ಯೂಷನ್ನು ಹಾಜರುಪಡಿಸಿರುವ ಸಾಕ್ಷ್ಯವು ನಂಬಲು ಯೋಗ್ಯವಾಗಿಲ್ಲವೆಂದು ನಿವೇದಿಸಿದ್ದಾರೆ. ಅಧಿವಿಚಾರಣಾ ನ್ಯಾಯಾಲಯವು, ಸದರಿ ಸಂಗತಿಯನ್ನು ಪರಿಗಣಿಸದೆ, ಆಪಾದಿತನನ್ನು ದೋಷಯುಕ್ತವಾಗಿ ಅಪರಾಧ ನಿರ್ಣೀತನನ್ನಾಗಿ ಮಾಡಿದೆ. ಅಷ್ಟೇ ಅಲ್ಲದೆ, ಅವರು, ಸನ್ನಿವೇಶಗಳಡಿಯಲ್ಲಿ ಆಪಾದಿತ ಘಟನೆ ಅವುಗಳನ್ನು ಒಟ್ಟಾರೆಯಾಗಿ ಪರಿಗಣನೆಗೆ ತೆಗೆದುಕೊಂಡಿದ್ದಲ್ಲಿ, ಆಪಾದಿತನು, ಪ್ಯಾರಾನಾಯ್ಡ್ ಸ್ಕಿಜೊಫ್ರೇನಿಯಾ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದನೆಂದು ಆ ಕಾಯಿಲೆಯ ಕಾರಣದಿಂದ ಆಪಾದಿತನು ಆ ಕೃತ್ಯದ ಸ್ವರೂಪವನ್ನು ಅರಿಯಲು ಅಸಮರ್ಥನಾಗಿದ್ದ ಎಂಬುದು ಮತ್ತು ಮೃತರ ಸಾವಿಗೆ ಕಾರಣವಾದ ಯಾವುದೇ ಮಾನಸಿಕ ಮೂಲಕಾರಣವನ್ನು ಹೊಂದಿರಲಿಲ್ಲವೆಂದು, ಆಗ ಆ ಸನ್ನಿವೇಶಗಳಲ್ಲಿ ಅಧಿವಿಚಾರಣಾ ನ್ಯಾಯಾಲಯವು ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಮೇರೆಗಿನ ಪ್ರಯೋಜನವನ್ನು ವಿಸ್ತರಿಸುವ ಮೂಲಕ ಆಪಾದಿತನನ್ನು ಖುಲಾಸೆಗೊಳಿಸಲೇ ಬೇಕೆಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. ಆದುದರಿಂದ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಆದೇಶವನ್ನು ಕಾನೂನಿನಲ್ಲಿ ಸಮರ್ಥಿಸಲಾಗುವುದಿಲ್ಲ. ಅಷ್ಟೇ ಅಲ್ಲದೆ, ಅವು, ಪ್ರತಿವಾದಿ ಸಾಕ್ಷ್ಯ.1ರ ಸಾಕ್ಷ್ಯವು, ಸ್ವವಿವರಣಾತ್ಮಕವಾಗಿದ್ದು, ಇದು, 1995 ರಿಂದ ಆಪಾದಿತನು ಚಿಕಿತ್ಸೆಗೊಳಗಾಗಿದ್ದನೆಂದು ಮತ್ತು ಅವನು ಕೇರಳ ರಾಜ್ಯದಲ್ಲಿ ಚಿಕಿತ್ಸೆಯನ್ನು ಸಹ ಪಡೆದುಕೊಳ್ಳುತ್ತಿದ್ದನೆಂಬುದನ್ನು ತೋರಿಸುತ್ತದೆ ಮತ್ತು ವೈದ್ಯಕೀಯ ಸಲಹೆಗೆ ಪ್ರತಿಯಾಗಿ ಆಸ್ಪತ್ರೆಯಿಂದ ಅವನನ್ನು ಬಿಡುಗಡೆಗೊಳಿಸಲಾಗಿತ್ತೆಂಬುದನ್ನು ಮತ್ತು ಅವನು ಬಿಡುಗಡೆಯಾದ ನಂತರ 90

ದಿನಗಳೊಳಗೆ ಆಪಾದಿತ ಘಟನೆಯು ನಡೆದಿದೆಯೆಂಬುದನ್ನು ತೋರಿಸುತ್ತದೆಯೆಂದು ನಿವೇದಿಸಿದ್ದಾರೆ. ಇದು ನಡೆದ ನಂತರವೂ ಕೂಡ ಮತ್ತೆ ಅವನನ್ನು ಚಿಕಿತ್ಸೆಗಾಗಿ ನಿಮ್ಹಾನ್ಸ್ (NIMHANS) ಆಸ್ಪತ್ರೆಗೆ ಸೇರಿಸಲಾಗಿತ್ತು. ಈ ಎಲ್ಲಾ ಒಟ್ಟಾರೆ ಸಂದರ್ಭಗಳು, ಆಪಾದಿತನು ಆಪಾದಿತ ಘಟನೆಯು ನಡೆದಾಗ ಆ ಸಮಯದಲ್ಲಿ ಆಪಾದಿತನು ಮತಿಭ್ರಾಂತನಾಗಿದ್ದನೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ – ಹಾಗೂ ಸದರಿ ಸಂಗತಿಯನ್ನು ಅವನು ರುಜುವಾತುಪಡಿಸಿದ್ದಾನೆ. ಅಂಥ ಸಂದರ್ಭಗಳಲ್ಲಿ ಅಧಿವಿಚಾರಣಾ ನ್ಯಾಯಾಲಯವು ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಪ್ರಯೋಜನವನ್ನು, ಆಪಾದಿತನಿಗೆ ನೀಡಲೇಬೇಕು. ತಮ್ಮ ವಾದವನ್ನು ಪುಷ್ಟೀಕರಿಸುವ ಸಲುವಾಗಿ, ಅವರು, ಎಐಆರ್ 1964 ಎಸ್‌ಸಿ 1563 ರಲ್ಲಿ ವರದಿಯಾದ *ದಹ್ಯಾಭಾಯಿ ಛಗನ್‌ಬಾಯಿ ತಕ್ಕರ್ –ವಿರುದ್ಧ– ಗುಜರಾತ್ ರಾಜ್ಯ* ಪ್ರಕರಣದಲ್ಲಿ ಮತ್ತು *(2002) 7 ಎಸ್‌ಸಿಸಿ 748* ರಲ್ಲಿ ವರದಿಯಾದ *ಶ್ರೀಕಾಂತ್ ಆನಂದರಾವ್ ಭೋಸಲೆ –ವಿರುದ್ಧ– ಮಹಾರಾಷ್ಟ್ರ ರಾಜ್ಯ* ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಿದ್ದಾರೆ. ಈ ಆಧಾರಗಳ ಮೇಲೆ ಅವನು ಅಪೀಲನ್ನು ಪುರಸ್ಕರಿಸಲು ಮತ್ತು ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಆದೇಶವನ್ನು ತಳ್ಳಿಹಾಕಲು ಮತ್ತು ಆಪಾದಿತನನ್ನು ಖುಲಾಸೆಗೊಳಿಸಲು ಕೋರಿದ್ದಾನೆ. ಮತ್ತೊಂದು ಕಡೆ, ಮಾನ್ಯ ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರು ಆಪಾದಿತನು, ಅವನ ಹೆಂಡತಿಯನ್ನು ಕೊಲೆ ಮಾಡಿರುವುದನ್ನು ಪ್ರಾಸಿಕ್ಯೂಷನ್ನು, ಸ್ಪಷ್ಟವಾಗಿ ರುಜುವಾತುಪಡಿಸಿದೆಯೆಂಬುದನ್ನು ನಿವೇದಿಸುವ ಮೂಲಕ ಭಾವಾವೇಶಪೂರಿತವಾಗಿ ವಾದಿಸಿದ್ದು, ಪ್ರಾಸಾ–4, ಆಪಾದಿತನ ಮಗಳು ಹಾಗೂ ಆಪಾದಿತನು, ಘಟನೆಯ ದಿನಾಂಕದಂದು ಆಪಾದಿತ ಮತ್ತು ಮೃತಳ ನಡುವೆ ಜಗಳ ನಡೆದಿದ್ದು, ಇದಾದನಂತರ, ಆಪಾದಿತನು ಅವರಿಗೆ ಮನೆಯಿಂದ ಹೊರಗೆ ಹೋಗಿ ಮಲಗಲು ಹೇಳಿದ್ದು, ಮನೆಯೊಳಗೆ ಮೃತಳು ನಿದ್ರಿಸುತ್ತಿದ್ದಳೆಂಬುದನ್ನು ಅವಳ ಸಾಕ್ಷ್ಯದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾಳೆ. ರಾತ್ರಿ ಸುಮಾರು 8.30ರಲ್ಲಿ ಆಪಾದಿತನು ಹೊರಗಡೆ ಬಂದು, ಎಲ್ಲರೂ ನಿದ್ರಿಸುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಿದ್ದನು. ಆ ಸಮಯದಲ್ಲಿ, ಪ್ರಾಸಾ–4 ಅವಳಿಗೆ ನಿದ್ರೆ ಬಂದಿದ್ದರೆ ಹೇಗೋ ಹಾಗೆ ನಟಿಸಿದ್ದಾಳೆ, ಆಪಾದಿತನು ಒಳಗಡೆ ಹೋದ ನಂತರ ತನ್ನ ತಾಯಿಯನ್ನು ಕೊಲೆಮಾಡಿ ಆ ನಂತರ, ಅವನು ತನ್ನ ಹೆಂಡತಿಯನ್ನು ಕೊಲೆಮಾಡಿದೆನೆಂದು ಹೇಳುತ್ತಾ ಹೊರಬಂದಿದ್ದಾನೆ. ಸದರಿ

ಸಂಗತಿಯೇ ನ್ಯಾಯಿಕೇತರ ತಪ್ಪೊಪ್ಪಿಗೆಗೆ ಕಾರಣವಾಗಿದ್ದು, ಆಪಾದಿತ ಮತ್ತು ಮೃತರಿಬ್ಬರೇ ಮನೆಯಲ್ಲಿ ಉಳಿದಿದ್ದು, ಭಾರತ ಸಾಕ್ಷ್ಯ ಅಧಿನಿಯಮದ 106ನೇ ಪ್ರಕರಣದ ಪ್ರಕಾರ ಅಂಥ ಸನ್ನಿವೇಶಗಳ ಅಡಿಯಲ್ಲಿ ಅವನು, ಯಾವ ಸನ್ನಿವೇಶಗಳ ಅಡಿಯಲ್ಲಿ ಮನೆಯೊಳಗೆ ಮೃತಳ ಸಾವು ಸಂಭವಿಸಿದೆಯೆಂಬ ಬಗ್ಗೆ ವಿವರಿಸಬೇಕು. ಅಷ್ಟೇ ಅಲ್ಲದೆ, ಅವರು, ಘಟನೆ ನಡೆದ ಕೂಡಲೇ, ಆಪಾದಿತನು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಲೂ ಪ್ರಯತ್ನಿಸಿದ್ದಾನೆಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು, ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಉಪಬಂಧಗಳನ್ನು ಅನ್ವಯಿಸಲು ಆಪಾದಿತನು, ಆಪಾದಿತ ಘಟನೆ ನಡೆದ ಸಮಯದಲ್ಲಿ ಅವನು ಮಾನಸಿಕ ಅಸ್ವಸ್ಥನಾಗಿದ್ದನೆಂಬುದನ್ನು ರುಜುವಾತುಪಡಿಸಬೇಕು ಎಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು, ಘಟನೆ ನಡೆದ ಕೂಡಲೇ ಆಪಾದಿತನನ್ನು ಆಸ್ಪತ್ರೆಗೆ ಕೊಂಡೊಯ್ಯಲಾಗಿದ್ದು, ವೈದ್ಯ–ಪ್ರಾ.ಸಾ–15 ಅವನನ್ನು ಪರೀಕ್ಷಿಸಿದ್ದಾಗ, ಅವರು, ಆಪಾದಿತನು ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದನೆಂದು ಅಭಿಪ್ರಾಯಪಟ್ಟಿಲ್ಲವೆಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು, ಆಪಾದಿತನು ನಿಮ್ಹಾನ್ಸ್ (NIMHANS) ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದರೂ ಕೂಡ, ಇದು ಪ್ರಶ್ನಿತ ಘಟನೆಗೂ ಮೊದಲು 15 ರಿಂದ 20 ದಿನಗಳಾಗಿದ್ದು, ಆಪಾದಿತ ಘಟನೆಯ ಸಮಯದಲ್ಲಿ ಆಪಾದಿತನು ಮಾನಸಿಕ ಅಸ್ವಸ್ಥನಾಗಿದ್ದನು ಎಂದು ಅಭಿಪ್ರಾಯಪಟ್ಟು, ಆಪಾದಿತನಿಗೆ ಪ್ರಯೋಜನಕ್ಕೆ ದೊರಕುವುದಿಲ್ಲವೆಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು, ದಾಖಲೆಯಲ್ಲಿರುವ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಗಣಿಸಿದ ತರುವಾಯ ಅಧಿವಿಚಾರಣಾ ನ್ಯಾಯಾಲಯವು, ಇಲ್ಲಿ ಆಪಾದಿತ–ಅಪೀಲುದಾರನನ್ನು ಅಪರಾಧಿ ಎಂದು ಸರಿಯಾಗಿ ನಿರ್ಣಯಿಸಿದೆಯೆಂದು ನಿವೇದಿಸಿದ್ದಾರೆ. ಪ್ರಶ್ನಿತ ತೀರ್ಪು ಮತ್ತು ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಹಾಗೇ ಯಾವುದೇ ಒಳ್ಳೆಯ ಆಧಾರಗಳನ್ನು ಅಪೀಲುದಾರನು ರೂಪಿಸಿರುವುದಿಲ್ಲ. ಆದುದರಿಂದ, ಪ್ರಶ್ನಿತ ತೀರ್ಪು ಮತ್ತು ಆದೇಶವನ್ನು ಸ್ಥಿರಗೊಳಿಸುವ ಮೂಲಕ ಗುಣಾರ್ಹತೆಗಳಿಲ್ಲದಿರುವ ಈ ಅಪೀಲನ್ನು ವಜಾಗೊಳಿಸಬಹುದೆಂದು ಕೋರಿದ್ದಾರೆ.

ತಮ್ಮ ಪ್ರತಿವಾದವನ್ನು ರುಜುವಾತುಪಡಿಸಲು, ಆಪಾದಿತನನ್ನು ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಮನೋವೈದ್ಯಕೀಯ ಹೆಚ್ಚುವರಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿರುವ ಪ್ರತಿವಾದಿ

ಸಾಕ್ಷ್ಯ–1 – ಡಾ॥ ಸುರೇಶ್ ಬಡದ್‌ಮಠ್‌ರವರನ್ನು ವಿಚಾರಣೆಮಾಡಿದ್ದು, ಅವರು, ಮೊದಲ ಬಾರಿಗೆ ಆಪಾದಿತನು ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ದಿನಾಂಕ: 09.09.2009 ರಂದು ಮೊದಲಬಾರಿಗೆ ಒಳರೋಗಿಯಾಗಿ ಪ್ರವೇಶ ಪಡೆದಿದ್ದ, ವೈದ್ಯಕೀಯ ಸಲಹೆಗೆ ವಿರುದ್ಧವಾಗಿ, ಆಪಾದಿತನ ಕುಟುಂಬ ಸದಸ್ಯರು 15.09.2009 ರಂದು ಬಿಡುಗಡೆ ಮಾಡಿಸಿಕೊಂಡಿದ್ದಾರೆ. ದಿನಾಂಕ:15.06.2009 ರಂದು ಆಪಾದಿತನನ್ನು ಅವನಿಗೆ ಮೂರು ಬಾರಿ ಇಸಿಟಿ (ಎಲೆಕ್ಟ್ರೊ ಕನ್‌ವಲ್ಸಿವ್ ಥೆರಪಿ) ಮಾಡಿಸಿಕೊಳ್ಳಲು ಸೂಚಿಸಲಾಗಿತ್ತು. ದಿನಾಂಕ 09.03.2010 ರಂದು ಆಪಾದಿತನ ಕುಟುಂಬ ಸದಸ್ಯರು ಮತ್ತೆ ಅವನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು ಮತ್ತು ಅವನು 24.04.2010 ರವರೆಗೆ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿದ್ದನು. ದಿನಾಂಕ 11.07.2010 ರಂದು ಪುನಃ ಅವನನ್ನು ಆಸ್ಪತ್ರೆಗೆ ಕರೆತಂದಿದ್ದು ಅವನನ್ನು ದಿನಾಂಕ 13.07.2010 ರಂದು ಬಿಡುಗಡೆಗೊಳಿಸಲಾಗಿತ್ತು. ಅಷ್ಟೇ ಅಲ್ಲದೆ ಪ್ರತಿವಾದಿ ಸಾಕ್ಷ್ಯ–1 ನ್ಯಾಯಾಲಯದ ಆದೇಶದ ಪ್ರಕಾರ ಆಪಾದಿತನನ್ನು 19.11.2010 ರಂದು ದಾಖಲಿಸಿಕೊಳ್ಳಲಾಗಿತ್ತು ಮತ್ತು 08.12.2010 ರಂದು ಬಿಡುಗಡೆಗೊಳಿಸಲಾಗಿತ್ತು. ಪುನಃ ಜೈಲಿನ ಅಧಿಕಾರಿಗಳು 11.05.2011 ರಂದು ದಾಖಲುಮಾಡಿದ್ದು 19.05.2011 ರಂದು ಪ್ರತಿವಾದಿ ಸಾಕ್ಷ್ಯ–1, ನಿಶಾನೆ ಡಿ1ರ ಪ್ರಕಾರ ರೋಗಿ ವಿವರಪಟ್ಟಿಯನ್ನೂ (case sheet) ಸಹ ಹಾಜರುಪಡಿಸಲಾಗಿತ್ತು. ಅಷ್ಟೇ ಅಲ್ಲದೆ, ಅವನು, ಆಪಾದಿತನು ತಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವನೆಂದು ಮತ್ತು ಅವನಿಗೆ ಎರಡು ಬಗೆಯ ಎಂದರೆ i) ಪ್ಯಾರಾನಾಯ್ಡ್ ಸ್ಕಿಜೊಫ್ರೇನಿಯಾ ii) ಮದ್ಯಸಾರ ಹಾನಿ ಬಳಕೆ ಎಂಬ ಮಾನಸಿಕ ಕಾಯಿಲೆಗಳಿದ್ದವು. ಆಪಾದಿತನು ಕಾಯಿಲೆಯ ಲಕ್ಷಣಗಳನ್ನು ಹೊಂದಿದ್ದು, ತನ್ನ ಪತ್ನಿಯ ಶೀಲವನ್ನು ಶಂಕಿಸುತ್ತಲೇ ಇದ್ದನು. ಅವನು, ಜನರು ತನ್ನ ಬಗ್ಗೆಯೇ ಮಾತನಾಡುತ್ತಿರಬಹುದು ಎಂಬ ಸಂದೇಹವನ್ನು ಹೊಂದಿದ್ದು; ಜನರು ತನ್ನನ್ನು ಕೊಲ್ಲಬಹುದು ಎಂಬ ಭಯವನ್ನು ಸಹ ಹೊಂದಿದ್ದನು ಮತ್ತು ಆತ್ಮಹತ್ಯೆ ಮಾಡಿಕೊಳ್ಳುವ ಪ್ರವೃತ್ತಿಯನ್ನು ಹೊಂದಿದ್ದು ಖಿನ್ನತೆಯುಳ್ಳವನಾಗಿದ್ದನು. ಈ ಕಾರಣದಿಂದ ಅವನು ಆಗಾಗ ಮದ್ಯವನ್ನು ಸೇವಿಸುತ್ತಿದ್ದನು. ಅಷ್ಟೇ ಅಲ್ಲದೆ ಅವನು, ಮೊದಲ ಬಾರಿಗೆ ಆಸ್ಪತ್ರೆಯಲ್ಲಿ ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿದ್ದಾಗ, ತಾನು ಗಂಭೀರ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದು, ಹಾಗಾಗಿ ತಾನು ಇಸಿಟಿ ಚಿಕಿತ್ಸೆಗೊಳಗಾಗಿದ್ದನೆಂದು ಹೇಳಿಕೆನೀಡಿದ್ದಾನೆ. ಅಷ್ಟೇ ಅಲ್ಲದೆ ಅವನು ಅವನಿಗೆ ಅಗತ್ಯಪಡಿಸಲಾಗಿದ್ದ ಚಿಕಿತ್ಸೆಯಾದ್ಯಂತ ಎರಡನೇ ಗುಂಪಿನ

ಪ್ರವೃತ್ತಿಯನ್ನು ಹೊಂದಿದ್ದನೆಂದು ಹೇಳಿಕೆನೀಡಿದ್ದಾನೆ. ಅಷ್ಟೇ ಅಲ್ಲದೆ ಅವನು, ಔಷಧವನ್ನು ನಿಲ್ಲಿಸಿದ್ದರಿಂದ ಸದರಿ ಕಾಯಿಲೆಯು ಹೆಚ್ಚಾಗಿ ಸದರಿ ಹಂತವನ್ನು ತಲುಪಿದ್ದನೆಂದು ಹೇಳಿಕೆನೀಡಿದ್ದಾನೆ. ಸದರಿ ಕಾಯಿಲೆಯು ಅನುವಂಶೀಯವಾದುದಾಗಿದೆ. ಅಷ್ಟೇ ಅಲ್ಲದೆ ಅವನು, ತನ್ನ ತಾಯಿಯೂ ಮಾನಸಿಕ ಕಾಯಿಲೆಯನ್ನು ಹೊಂದಿದ್ದು ಆಸ್ಪತ್ರೆಯಲ್ಲಿ ದಾಖಲೆಯಿದೆಯೆಂದು ಹೇಳಿಕೆನೀಡಿದ್ದಾನೆ. ಅಷ್ಟೇ ಅಲ್ಲದೆ ಆಪಾದಿತನನ್ನು ಮೊದಲಬಾರಿಗೆ ಕರೆತಂದಿದ್ದಾಗ, ಅವನು ಯಾರ ಮಾತನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲವೆಂದು ಹೇಳಿಕೆನೀಡಿದ್ದಾನೆ. ಸದರಿ ಕಾಯಿಲೆಯ ಅವಧಿಯಲ್ಲಿ, ಅವನು ತಾನೇನು ಕೃತ್ಯ ಮಾಡುವೆನೆಂಬುದನ್ನು ತಿಳಿದುಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಅಷ್ಟೇ ಅಲ್ಲದೆ, ಅವನು, ಆಪಾದಿತನ ಘಟನೆ ನಡೆದ ಸಮಯದಲ್ಲಿ ಆಪಾದಿತನ ಸ್ಥಿತಿ ಹೇಗಿತ್ತು ಎಂಬ ಬಗ್ಗೆ ಅವನು ಹೇಳಲು ಆಗಿರಲಿಲ್ಲವೆಂದು ಹೇಳಿಕೆನೀಡಿದ್ದಾನೆ. ಪಾಟೀ–ಸವಾಲು ನಡೆಯುವ ಅವಧಿಯಲ್ಲಿ, ಪ್ರತಿವಾದಿ ಸಾಕ್ಷ್ಯ–1, ದಿನಾಂಕ 14.09.2009 ರಂದು, ಆಪಾದಿತನಲ್ಲಿ ಸುಧಾರಣೆಯ ಗುರುತುಗಳಿದ್ದವೆಂದು, ಅವನನ್ನು ಕಾಯುವ ಮೂಲಕ ನೋಡಿಕೊಳ್ಳುವ ಅಗತ್ಯವಿರಲಿಲ್ಲವೆಂದು ಹೇಳಿಕೆ ನೀಡಿದ್ದಾನೆ. ಅಷ್ಟೇ ಅಲ್ಲದೆ ಅವನು, 01.10.2009 ರಂದು ಇದ್ದಂತೆ ಆಪಾದಿತನ ಮಾನಸಿಕ ಸ್ಥಿತಿಗತಿ ಹೇಗಿತ್ತು ಎಂಬುದನ್ನು ಹೇಳಲು ಸಾಧ್ಯವಿಲ್ಲವೆಂದು ಹೇಳಿಕೆ ನೀಡಿದ್ದಾನೆ. ಇಷ್ಟನ್ನು ಬಿಟ್ಟರೆ, ಈ ಸಾಕ್ಷಿದಾರನ ಬಾಯಿಂದ ಬೇರೇನೂ ಹೊರಬಿದ್ದಿಲ್ಲ.

ಆಪಾದಿತನು ಆಪಾದಿತ ಅಪರಾಧವನ್ನು ಎಸಗಿರುವನೆಂಬ ನಿರ್ಣಯಕ್ಕೆ ಬಂದಿದ್ದರೂ ಪ್ರತಿವಾದಿ ಸಾಕ್ಷ್ಯ–18 ಸಾಕ್ಷ್ಯದಿಂದ ಮತ್ತು ಈ ಬಗ್ಗೆ ಹಾಜರುಪಡಿಸಲಾದ ಇತರ ಸಾಕ್ಷ್ಯಧಾರಗಳಿಂದ ಆಪಾದಿತನು, ತಾನು ಆಪಾದಿತ ಅಪರಾಧ ನಡೆದ ಸಮಯದಲ್ಲಿ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದೇನೆಂದು ಮತ್ತು ಕೃತ್ಯದ ಸ್ವರೂಪ ಅರಿಯಲು ಅಸಮರ್ಥನಾಗಿದ್ದೆನೆಂದು ರುಜುವಾತುಪಡಿಸಿರುವನೆಂಬುದನ್ನು ಗುರುತಿಸಿದ್ದೇವೆ. ಪ್ರಕರಣ ಹೀಗಿರುವಾಗ, ಸಾಮಾನ್ಯ ವಿನಾಯಿತಿಗಳು ಬರುತ್ತವೆ. ಮಾನಸಿಕ ಅಸ್ವಸ್ಥನಾಗಿರುವ ಕಾರಣದಿಂದ ಅದನ್ನು ಮಾಡುವ ಸಮಯದಲ್ಲಿ ಕೃತ್ಯದ ಸ್ವರೂಪವನ್ನು ತಿಳಿಯಲು ಅಸಮರ್ಥನಾಗಿರುವ ವ್ಯಕ್ತಿಯು, ಮಾಡಿರುವ ಅಪರಾಧ ಯಾವುದು ತಪ್ಪು ಅಥವಾ ಕಾನೂನಿಗೆ ವಿರುದ್ಧವಾದುದನ್ನು ಅವನು ಮಾಡಿರುವುದು ಯಾವುದೂ

**ಅಪರಾಧವಾಗುವುದಿಲ್ಲ. ಆದುದರಿಂದ, ಆಪಾದಿತ–ಅಪೀಲುದಾರನು ಇಲ್ಲಿ ಖುಲಾಸೆಗೊಳಿಸಲು ಹಕ್ಕುಳ್ಳವನಾಗುವನು.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ಎಐಆರ್ 1964 ಎಸ್‌ಸಿ 1563*
*ದಹ್ಯಾಭಾಯಿ ಛಗನ್‌ಭಾಯಿ ತಕ್ಕರ್ –ವಿರುದ್ಧ–*
*ಗುಜರಾತ್ ರಾಜ್ಯ* *(ಉಲ್ಲೇ) 5*
*2. (2002) 7 ಎಸ್‌ಸಿಸಿ 748*
*ಶ್ರೀಕಾಂತ್ ಆನಂದರಾವ್ ಭೋಸಲೆ –ವಿರುದ್ಧ–*
*ಮಹಾರಾಷ್ಟ್ರ ರಾಜ್ಯ* *(ಉಲ್ಲೇ) 5*
*3. ಎಐಆರ್ 2008 ಎಸ್‌ಸಿ 1842*
*ಗೊಲ್ಲ ಯೆಲುಗು ಗೋವಿಂದು –ವಿರುದ್ಧ–*
*ಆಂಧ್ರಪ್ರದೇಶ ರಾಜ್ಯ* *(ಉಲ್ಲೇ) 10*
*4. ಕ್ರಿಮಿನಲ್ ಅಪೀಲು ಸಂ. 502/2012*
*ದಿನಾಂಕ 15.03.2016*
*ಶ್ರೀ ಬಿ. ಸುಧಾಕರ –ವಿರುದ್ಧ– ಪೊಲೀಸು ಪರಿವೀಕ್ಷಕರ*
*ಮೂಲಕ, ಮಂಗಳೂರು ಉತ್ತರ* *(ಉಲ್ಲೇ) 22*

ಅರ್ಜಿದಾರರ ಪರ: ಶ್ರೀ ಎನ್.ಎಸ್. ಸಂಪಂಗಿ ರಾಮಯ್ಯ, ಅಮಿಕಸ್ ಕ್ಯೂರಿ
ಶ್ರೀ ಕೆ.ಬಿ.ಕೆ. ಸ್ವಾಮಿ, ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀ ವಿಜಯಕುಮಾರ್ ಮಜಗೆ, ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್:**

ಅಪೀಲುದಾರನಾದ, ಮುನಿಶೆಟ್ಟಿಯವರ ಮಗನಾದ ಆಪಾದಿತ ಮಹಾದೇವನು, ಎಸ್.ಸಿ. ಸಂ.13/2010ರಲ್ಲಿ ಕೊಳ್ಳೆಗಾಲದ ತ್ವರಿತ ನ್ಯಾಯಾಲಯದ

ಸೆಷನ್ಸ್ ನ್ಯಾಯಾಧೀಶರು ಮತ್ತು ಪ್ರಿಸೈಡಿಂಗ್ ಅಧಿಕಾರಿಯವರು, ಭಾರತ ದಂಡ ಸಂಹಿತೆಯ 302 ಮತ್ತು 309ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಅಪರಾಧ ನಿರ್ಣೀತನಾಗಿದ್ದು, ಅವನಿಗೆ ಕಠಿಣ ಕಾರಾವಾಸ ಶಿಕ್ಷೆಯನ್ನು ವಿಧಿಸಿ, 50,000/– ರೂ.ಗಳ ಜುಲ್ಮಾನೆಯನ್ನು ವಿಧಿಸಲಾಗಿದ್ದು, ತಪ್ಪಿದಲ್ಲಿ ಐದು ತಿಂಗಳುಗಳ ಅವಧಿಯ ಹೆಚ್ಚಿನ ಕಾರಾವಾಸ ಶಿಕ್ಷೆಗೊಳಪಡಿಸಲು ಮತ್ತು ದಿನಾಂಕ 5/11.07.2014ರ ತೀರ್ಪು ಮತ್ತು ಆದೇಶದ ಮೂಲಕ ಆರು ತಿಂಗಳುಗಳ ಅವಧಿಗೆ ಸಾದಾ ಕಾರಾವಾಸ ಶಿಕ್ಷೆಗೂ ಸಹ ಒಳಪಡಿಸಲಾಗಿತ್ತು. ಇದನ್ನು ಪ್ರಶ್ನಿಸಿರುವ ಇವನು ಪ್ರಸ್ತುತ ಅಪೀಲನ್ನು ಹೂಡಿದ್ದಾನೆ.

2. ನಾವು ಪ್ರಕರಣದ ಗುಣಾವಗುಣಗಳನ್ನು ಗಮನಿಸುವ ಮೊದಲು, ಪ್ರಾಸಿಕ್ಯೂಷನ್‌ನ ಮೊಕದ್ದಮೆಯ ಸಂಕ್ಷಿಪ್ತವಾದ ಸಂಗತಿಗಳನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ. ದಿನಾಂಕ 01.10.2009 ರಂದು ರಾತ್ರಿಯ ಊಟವನ್ನು ಮುಗಿಸಿದ ನಂತರ ಆಪಾದಿತನು, ಮಗಳಾದ ಜ್ಯೋತಿ ಮತ್ತು ಅವನ ತಾಯಿ ಮಾರಮ್ಮಳನ್ನು ಮನೆಯೊಳಗೆ ಬಂದರೆ ಅವನು ಅವರ ಕಾಲುಗಳನ್ನು ಕತ್ತರಿಸುವುದಾಗಿ ಹೆದರಿಸುವ ಮೂಲಕ ಹೊರಗಡೆ ಮಲಗಲು ಬಲವಂತಪಡಿಸಿದ್ದಾನೆ, ಅಷ್ಟೇ ಅಲ್ಲದೆ, ಆಪಾದಿತನು ತನ್ನ ಪತ್ನಿಯಾದ ಮೃತ ಜಯಮ್ಮಳ ಶೀಲವನ್ನು ಶಂಕಿಸುತ್ತಿದ್ದನೆಂಬುದು ಪ್ರಾಸಿಕ್ಯೂಷನ್‌ನ ವಾದವಾಗಿದೆ. ಜಯಮ್ಮಳು ಮನೆಯ ಒಳಗಡೆ ರಾತ್ರಿ ಸುಮಾರು 8.30ರಲ್ಲಿ ನಿದ್ದೆಹೋದಾಗ, ಮಚ್ಚಿನಿಂದ ಅವನು ಅವಳ ಕತ್ತನ್ನು ಕತ್ತರಿಸಿದ್ದು ಆ ಮೂಲಕ ತನ್ನ ಹೆಂಡತಿಯಾದ ಜಯಮ್ಮಳ ಕೊಲೆ ಮಾಡಿದ್ದಾನೆ. ಇದಾದ ನಂತರ ಅವನು ವಿಷವನ್ನು ಕುಡಿದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಾನೆ. ಹೀಗೆ ಭಾರತ ದಂಡ ಸಂಹಿತೆಯ 302 ಮತ್ತು 309ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಅಪರಾಧ ಸಂ.126/2009ರಲ್ಲಿ ಪ್ರಕರಣವನ್ನು ದಾಖಲಿಸಲಾಗಿತ್ತು. ತನಿಖೆಯನ್ನು ಪೂರ್ಣಗೊಳಿಸಿದ ನಂತರ, ಆರೋಪಿತನ ವಿರುದ್ಧ ಆರೋಪ ಪಟ್ಟಿಯನ್ನು ದಾಖಲಿಸಲಾಗಿತ್ತು. ಇದಾದನಂತರ, ಅಧಿವಿಚಾರಣಾ

ನ್ಯಾಯಾಲಯವು, ಪ್ರಕರಣವನ್ನು ಸೆಷನ್ಸ್ ನ್ಯಾಯಾಲಯಕ್ಕೆ ಒಪ್ಪಿಸಿದ್ದು, ಸೆಷನ್ಸ್ ನ್ಯಾಯಾಲಯವು ಸಂಜ್ಞೇಯತೆಯನ್ನು ತೆಗೆದುಕೊಂಡು, ಮಾನ್ಯ ಸರ್ಕಾರಿ ಅಭಿಯೋಜಕರು ಮತ್ತು ಆಪಾದಿತನ ಮಾನ್ಯ ವಕೀಲರ ವಾದಗಳನ್ನು ಆಲಿಸಿದ ತರುವಾಯ, ಆರೋಪವನ್ನು ಸಿದ್ಧಪಡಿಸಿದ್ದು ಅದನ್ನು ಓದಲಾಗಿದ್ದು, ಆಪಾದಿತನಿಗೆ ವಿವರಿಸಲಾಗಿದೆ. ಆಪಾದಿತನು ತಾನು ತಪ್ಪಿತಸ್ಥನಲ್ಲವೆಂದು ವಾದಿಸಿದ್ದು, ಅಧಿವಿಚಾರಣೆ ಮಾಡಲು ಕ್ಲೇಮು ಮಾಡಿದ್ದು, ಹೀಗೆ ಅಧಿವಿಚಾರಣೆಯನ್ನು ನಿಗದಿಪಡಿಸಲಾಗಿತ್ತು.

3. ತನ್ನ ವಾದವನ್ನು ರುಜುವಾತುಪಡಿಸುವ ಸಲುವಾಗಿ, ಪ್ರಾಸಿಕ್ಯೂಷನ್ನು 16 ಜನ ಸಾಕ್ಷಿದಾರರನ್ನು ವಿಚಾರಣೆ ಮಾಡಿದ್ದು, ಉಪ–ಗುರುತುಗಳನ್ನು ಮಾಡುವುದರ ಜೊತೆಗೆ 26 ನಿಶಾನೆಗಳನ್ನು, 10 ಮುದ್ದೆಮಾಲುಗಳನ್ನು ಗುರುತು ಮಾಡಲಾಗಿದೆ. ಇದಾದ ತರುವಾಯ, ಅಪರಾಧಕ್ಕೆ ಸಿಕ್ಕಿಸುವ ಆಧಾರದ ಮೇಲೆ ಪ್ರಶ್ನಾವಳಿಗಳನ್ನು ಸಿದ್ಧಪಡಿಸುವ ಮೂಲಕ ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಮೇರೆಗೆ ಆಪಾದಿತನ ಹೇಳಿಕೆಯನ್ನು ದಾಖಲಿಸಲಾಗಿತ್ತು, ಆಪಾದಿತನು ಇದನ್ನು ನಿರಾಕರಿಸಿದ್ದು, ಇದಾದನಂತರ, ಅವರು, ವೈದ್ಯರನ್ನು ಪ್ರತಿವಾದಿ ಸಾಕ್ಷ್ಯ 1 ಎಂದು ವಿಚಾರಣೆಗೊಳಪಡಿಸಿ ನಿಶಾನೆ ಡಿ1 ಎಂದು ಗುರುತು ಹಾಕಲಾಯಿತು. ಪಕ್ಷಕಾರರಿಬ್ಬರ ಪರವಾಗಿ ಹಾಜರಾಗಿದ್ದ ಮಾನ್ಯ ವಕೀಲರ ವಾದವನ್ನು ಆಲಿಸಿದ ನಂತರ ಅಧಿವಿಚಾರಣಾ ನ್ಯಾಯಾಲಯವು, ಪ್ರಾಸಿಕ್ಯೂಷನ್‌ನ ವಾದವನ್ನು ರುಜುವಾತುಪಡಿಸಲು ಸಾಕಷ್ಟು ಸಾಕ್ಷ್ಯಾಧಾರಗಳಿವೆಯೆಂಬ ನಿರ್ಣಯಕ್ಕೆ ಬಂದಿದ್ದು, ಅಂತಿಮವಾಗಿ, ಮೇಲೆ ಹೇಳಲಾದ ಅಪರಾಧಗಳಿಗಾಗಿ ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಿತು.

4. ಅಪೀಲುದಾರ–ಆಪಾದಿತನನ್ನು ಪ್ರತಿನಿಧಿಸಿರುವ ಮಾನ್ಯ ನ್ಯಾಯಾಲಯ ಮಿತ್ರ ಶ್ರೀ ಸಂಪಂಗಿ ರಾಮಯ್ಯ ಎಸ್.ಎಸ್. ರವರ ವಾದವನ್ನು ಆಲಿಸಿದ್ದು, ತದನಂತರ ಮಾನ್ಯ ವಕೀಲರಾದ ಶ್ರೀ ಕೆ.ಬಿ.ಕೆ. ಸ್ವಾಮಿಯವರ ವಾದವನ್ನು, ಹಾಗೆಯೇ ಎದುರುದಾರ–ರಾಜ್ಯದ ಪರವಾಗಿ ಹಾಜರಾಗಿರುವ ಮಾನ್ಯ ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ರವರ ವಾದವನ್ನು ಸಹಾ ನಾವು ಆಲಿಸಿದ್ದೇವೆ.

5. ಅಪೀಲು ಮೆಮೊದಲ್ಲಿ ಒತ್ತಾಯಪಡಿಸಲಾದ ಆಧಾರಗಳಿಂದಷ್ಟೇ ಅಲ್ಲದೆ, ದಾಖಲೆಯಲ್ಲಿರುವ ಸಾಕ್ಷ್ಯವನ್ನು ನಮ್ಮ ಮುಂದೆ ಮಂಡಿಸುವ ಮೂಲಕ ಮಾನ್ಯ ನ್ಯಾಯಾಲಯ ಮಿತ್ರ ಇವರು ಎಲ್ಲಾ ಯುಕ್ತ ಸಂದೇಹಗಳನ್ನು ಮೀರಿ ಆಪಾದಿತನ ತಪ್ಪನ್ನು ಮನಗಾಣಿಸಲು ಪ್ರಾಸಿಕ್ಯೂಷನ್ನು ಹಾಜರುಪಡಿಸಿರುವ ಸಾಕ್ಷ್ಯವು ನಂಬಲು ಯೋಗ್ಯವಾಗಿಲ್ಲವೆಂದು ನಿವೇದಿಸಿದ್ದಾರೆ. ಅಧಿವಿಚಾರಣಾ ನ್ಯಾಯಾಲಯವು, ಸದರಿ ಸಂಗತಿಯನ್ನು ಪರಿಗಣಿಸದೆ, ಆಪಾದಿತನನ್ನು ದೋಷಯುಕ್ತವಾಗಿ ಅಪರಾಧ ನಿರ್ಣೀತನನ್ನಾಗಿ ಮಾಡಿದೆ. ಅಷ್ಟೇ ಅಲ್ಲದೆ, ಅವರು, ಸನ್ನಿವೇಶಗಳಡಿಯಲ್ಲಿ ಆಪಾದಿತ ಘಟನೆ ಅವುಗಳನ್ನು ಒಟ್ಟಾರೆಯಾಗಿ ಪರಿಗಣನೆಗೆ ತೆಗೆದುಕೊಂಡಿದ್ದಲ್ಲಿ, ಆಪಾದಿತನು, ಪ್ಯಾರಾನಾಯ್ಡ್ ಸ್ಕಿಜೊಫ್ರೇನಿಯಾ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದನೆಂದು ಆ ಕಾಯಿಲೆಯ ಕಾರಣದಿಂದ ಆಪಾದಿತನು ಆ ಕೃತ್ಯದ ಸ್ವರೂಪವನ್ನು ಅರಿಯಲು ಅಸಮರ್ಥನಾಗಿದ್ದ ಎಂಬುದು ಮತ್ತು ಮೃತರ ಸಾವಿಗೆ ಕಾರಣವಾದ ಯಾವುದೇ ಮಾನಸಿಕ ಮೂಲಕಾರಣವನ್ನು ಹೊಂದಿರಲಿಲ್ಲವೆಂದು, ಆಗ ಆ ಸನ್ನಿವೇಶಗಳಲ್ಲಿ ಅಧಿವಿಚಾರಣಾ ನ್ಯಾಯಾಲಯವು ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಮೇರೆಗಿನ ಪ್ರಯೋಜನವನ್ನು ವಿಸ್ತರಿಸುವ ಮೂಲಕ ಆಪಾದಿತನನ್ನು ಖುಲಾಸೆಗೊಳಿಸಲೇಬೇಕೆಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. ಆದುದರಿಂದ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಆದೇಶವನ್ನು ಕಾನೂನಿನಲ್ಲಿ ಸಮರ್ಥಿಸಲಾಗುವುದಿಲ್ಲ. ಅಷ್ಟೇ ಅಲ್ಲದೆ, ಅವು, ಪ್ರತಿವಾದಿ ಸಾಕ್ಷ್ಯ.1ರ ಸಾಕ್ಷ್ಯವು, ಸ್ವವಿವರಣಾತ್ಮಕವಾಗಿದ್ದು, ಇದು, 1995 ರಿಂದ ಆಪಾದಿತನು ಚಿಕಿತ್ಸೆಗೊಳಗಾಗಿದ್ದನೆಂದು ಮತ್ತು ಅವನು ಕೇರಳ ರಾಜ್ಯದಲ್ಲಿ ಚಿಕಿತ್ಸೆಯನ್ನು ಸಹ ಪಡೆದುಕೊಳ್ಳುತ್ತಿದ್ದನೆಂಬುದನ್ನು ತೋರಿಸುತ್ತದೆ ಮತ್ತು ವೈದ್ಯಕೀಯ ಸಲಹೆಗೆ ಪ್ರತಿಯಾಗಿ ಆಸ್ಪತ್ರೆಯಿಂದ ಅವನನ್ನು ಬಿಡುಗಡೆಗೊಳಿಸಲಾಗಿತ್ತೆಂಬುದನ್ನು ಮತ್ತು ಅವನು ಬಿಡುಗಡೆಯಾದ ನಂತರ 90 ದಿನಗಳೊಳಗೆ ಆಪಾದಿತ ಘಟನೆಯು ನಡೆದಿದೆಯೆಂಬುದನ್ನು ತೋರಿಸುತ್ತದೆಯೆಂದು ನಿವೇದಿಸಿದ್ದಾರೆ. ಇದು ನಡೆದ ನಂತರವೂ ಕೂಡ ಮತ್ತೆ ಅವನನ್ನು ಚಿಕಿತ್ಸೆಗಾಗಿ ನಿಮ್ಹಾನ್ಸ್ (NIMHANS) ಆಸ್ಪತ್ರೆಗೆ ಸೇರಿಸಲಾಗಿತ್ತು. ಈ ಎಲ್ಲಾ ಒಟ್ಟಾರೆ ಸಂದರ್ಭಗಳು, ಆಪಾದಿತನು ಆಪಾದಿತ ಘಟನೆಯು ನಡೆದಾಗ

ಆ ಸಮಯದಲ್ಲಿ ಆಪಾದಿತನು ಮತಿಭ್ರಾಂತನಾಗಿದ್ದನೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ – ಹಾಗೂ ಸದರಿ ಸಂಗತಿಯನ್ನು ಅವನು ರುಜುವಾತುಪಡಿಸಿದ್ದಾನೆ. ಅಂಥ ಸಂದರ್ಭಗಳಲ್ಲಿ ಅಧಿವಿಚಾರಣಾ ನ್ಯಾಯಾಲಯವು ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಪ್ರಯೋಜನವನ್ನು, ಆಪಾದಿತನಿಗೆ ನೀಡಲೇಬೇಕು. ತಮ್ಮ ವಾದವನ್ನು ಪುಷ್ಟೀಕರಿಸುವ ಸಲುವಾಗಿ, ಅವರು, ***ದಹ್ಯಾಭಾಯಿ ಛಗನ್‌ಬಾಯಿ ತಕ್ಕರ್ –ವಿರುದ್ಧ– ಗುಜರಾತ್ ರಾಜ್ಯ***[1], ಪ್ರಕರಣದಲ್ಲಿ ಮತ್ತು ***ಶ್ರೀಕಾಂತ್ ಆನಂದರಾವ್ ಭೋಸಲೆ –ವಿರುದ್ಧ– ಮಹಾರಾಷ್ಟ್ರ ರಾಜ್ಯ***[2], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಿದ್ದಾರೆ. ಈ ಆಧಾರಗಳ ಮೇಲೆ ಅವನು ಅಪೀಲನ್ನು ಪುರಸ್ಕರಿಸಲು ಮತ್ತು ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಆದೇಶವನ್ನು ತಳ್ಳಿಹಾಕಲು ಮತ್ತು ಆಪಾದಿತನನ್ನು ಖುಲಾಸೆಗೊಳಿಸಲು ಕೋರಿದ್ದಾನೆ.

6. ಅಪೀಲುದಾರ–ಆಪಾದಿತನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಆಪಾದಿತನು ಆಪಾದಿತ ಅಪರಾಧವನ್ನು ಮಾಡಲು ಯಾವುದೇ ಅಪರಾಧಿಕ ಮನಸ್ಸನ್ನು ಹೊಂದಿರಲಿಲ್ಲವೆಂದು ಮತ್ತು ಪ್ರಾಸಾ–4 ಎಂದು ವಿಚಾರಣೆಗೆ ಬಂದಿದ್ದ ಆಪಾದಿತನ ಮಗಳ ಸಮ್ಮುಖದಲ್ಲೇ ಪ್ರಾಸಿಕ್ಯೂಷನ್ನು ರುಜುವಾತುಪಡಿಸಿಲ್ಲ ಮತ್ತು ಆಪಾದಿತನು ಮಾನಸಿಕವಾಗಿ ಅಸ್ವಸ್ಥನಾಗಿರುವಾಗ, ಅಧಿವಿಚಾರಣಾ ನ್ಯಾಯಾಲಯವು ಆಪಾದಿತನಿಗೆ ಸಂದೇಹದ ಪ್ರಯೋಜನವನ್ನು ನೀಡಲೇಬೇಕು ಎಂದು ನಿವೇದಿಸಿದ್ದಾರೆ. ಈ ಆಧಾರಗಳ ಮೇಲೆ ಈ ಅಪೀಲನ್ನು ಪುರಸ್ಕರಿಸಲು ಕೋರಿದ್ದಾರೆ.

7. ಮತ್ತೊಂದು ಕಡೆ, ಮಾನ್ಯ ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರು ಆಪಾದಿತನು, ಅವನ ಹೆಂಡತಿಯನ್ನು ಕೊಲೆ ಮಾಡಿರುವುದನ್ನು ಪ್ರಾಸಿಕ್ಯೂಷನ್ನು, ಸ್ಪಷ್ಟವಾಗಿ ರುಜುವಾತುಪಡಿಸಿದೆಯೆಂಬುದನ್ನು ನಿವೇದಿಸುವ ಮೂಲಕ ಭಾವಾವೇಶಪೂರಿತವಾಗಿ ವಾದಿಸಿದ್ದು, ಪ್ರಾಸಾ–4, ಆಪಾದಿತನ ಮಗಳು ಹಾಗೂ ಆಪಾದಿತನು, ಘಟನೆಯ ದಿನಾಂಕದಂದು ಆಪಾದಿತ ಮತ್ತು ಮೃತಳ ನಡುವೆ

1. ಎಐಆರ್ 1964 ಎಸ್‌ಸಿ 1563
2. (2002) 7 ಎಸ್‌ಸಿಸಿ 748

ಜಗಳ ನಡೆದಿದ್ದು, ಇದಾದನಂತರ, ಆಪಾದಿತನು ಅವರಿಗೆ ಮನೆಯಿಂದ ಹೊರಗೆ ಹೋಗಿ ಮಲಗಲು ಹೇಳಿದ್ದು, ಮನೆಯೊಳಗೆ ಮೃತಳು ನಿದ್ರಿಸುತ್ತಿದ್ದಳೆಂಬುದನ್ನು ಅವಳ ಸಾಕ್ಷ್ಯದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾಳೆ. ರಾತ್ರಿ ಸುಮಾರು 8.30ರಲ್ಲಿ ಆಪಾದಿತನು ಹೊರಗಡೆ ಬಂದು, ಎಲ್ಲರೂ ನಿದ್ರಿಸುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಿದ್ದನು. ಆ ಸಮಯದಲ್ಲಿ, ಪ್ರಾಸಾ–4 ಅವಳಿಗೆ ನಿದ್ರೆ ಬಂದಿದ್ದರೆ ಹೇಗೋ ಹಾಗೆ ನಟಿಸಿದ್ದಾಳೆ, ಆಪಾದಿತನು ಒಳಗಡೆ ಹೋದ ನಂತರ ತನ್ನ ತಾಯಿಯನ್ನು ಕೊಲೆಮಾಡಿ ಆ ನಂತರ, ಅವನು ತನ್ನ ಹೆಂಡತಿಯನ್ನು ಕೊಲೆಮಾಡಿದೆನೆಂದು ಹೇಳುತ್ತಾ ಹೊರಬಂದಿದ್ದಾನೆ. ಸದರಿ ಸಂಗತಿಯೇ ನ್ಯಾಯಿಕೇತರ ತಪ್ಪೊಪ್ಪಿಗೆಗೆ ಕಾರಣವಾಗಿದ್ದು, ಆಪಾದಿತ ಮತ್ತು ಮೃತರಿಬ್ಬರೇ ಮನೆಯಲ್ಲಿ ಉಳಿದಿದ್ದು, ಭಾರತ ಸಾಕ್ಷ್ಯ ಅಧಿನಿಯಮದ 106ನೇ ಪ್ರಕರಣದ ಪ್ರಕಾರ ಅಂಥ ಸನ್ನಿವೇಶಗಳ ಅಡಿಯಲ್ಲಿ ಅವನು, ಯಾವ ಸನ್ನಿವೇಶಗಳ ಅಡಿಯಲ್ಲಿ ಮನೆಯೊಳಗೆ ಮೃತಳ ಸಾವು ಸಂಭವಿಸಿದೆಯೆಂಬ ಬಗ್ಗೆ ವಿವರಿಸಬೇಕು. ಅಷ್ಟೇ ಅಲ್ಲದೆ, ಅವರು, ಘಟನೆ ನಡೆದ ಕೂಡಲೇ, ಆಪಾದಿತನು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಲೂ ಪ್ರಯತ್ನಿಸಿದ್ದಾನೆಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು, ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಉಪಬಂಧಗಳನ್ನು ಅನ್ವಯಿಸಲು ಆಪಾದಿತನು, ಆಪಾದಿತ ಘಟನೆ ನಡೆದ ಸಮಯದಲ್ಲಿ ಅವನು ಮಾನಸಿಕ ಅಸ್ವಸ್ಥನಾಗಿದ್ದನೆಂಬುದನ್ನು ರುಜುವಾತುಪಡಿಸಬೇಕು ಎಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು, ಘಟನೆ ನಡೆದ ಕೂಡಲೇ ಆಪಾದಿತನನ್ನು ಆಸ್ಪತ್ರೆಗೆ ಕೊಂಡೊಯ್ಯಲಾಗಿದ್ದು, ವೈದ್ಯ–ಪ್ರಾ.ಸಾ–15 ಅವನನ್ನು ಪರೀಕ್ಷಿಸಿದ್ದಾಗ, ಅವರು, ಆಪಾದಿತನು ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದನೆಂದು ಅಭಿಪ್ರಾಯಪಟ್ಟಿಲ್ಲವೆಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು, ಆಪಾದಿತನು ನಿಮ್ಹಾನ್ಸ್ (NIMHANS) ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದರೂ ಕೂಡ, ಇದು ಪ್ರಶ್ನಿತ ಘಟನೆಗೂ ಮೊದಲು 15 ರಿಂದ 20 ದಿನಗಳಾಗಿದ್ದು, ಆಪಾದಿತ ಘಟನೆಯ ಸಮಯದಲ್ಲಿ ಆಪಾದಿತನು ಮಾನಸಿಕ ಅಸ್ವಸ್ಥನಾಗಿದ್ದನು ಎಂದು ಅಭಿಪ್ರಾಯಪಟ್ಟರೂ, ಆಪಾದಿತನಿಗೆ ಪ್ರಯೋಜನಕ್ಕೆ ದೊರಕುವುದಿಲ್ಲವೆಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು, ದಾಖಲೆಯಲ್ಲಿರುವ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಗಣಿಸಿದ ತರುವಾಯ

ಅಧಿವಿಚಾರಣಾ ನ್ಯಾಯಾಲಯವು, ಇಲ್ಲಿ ಆಪಾದಿತ–ಅಪೀಲುದಾರನನ್ನು ಅಪರಾಧಿ ಎಂದು ಸರಿಯಾಗಿ ನಿರ್ಣಯಿಸಿದೆಯೆಂದು ನಿವೇದಿಸಿದ್ದಾರೆ. ಪ್ರಶ್ನಿತ ತೀರ್ಪು ಮತ್ತು ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಹಾಗೇ ಯಾವುದೇ ಒಳ್ಳೆಯ ಆಧಾರಗಳನ್ನು ಅಪೀಲುದಾರನು ರೂಪಿಸಿರುವುದಿಲ್ಲ. ಆದುದರಿಂದ, ಪ್ರಶ್ನಿತ ತೀರ್ಪು ಮತ್ತು ಆದೇಶವನ್ನು ಸ್ಥಿರಗೊಳಿಸುವ ಮೂಲಕ ಗುಣಾರ್ಹತೆಗಳಿಲ್ಲದಿರುವ ಈ ಅಪೀಲನ್ನು ವಜಾಗೊಳಿಸಬಹುದೆಂದು ಕೋರಿದ್ದಾರೆ.

8. ತನ್ನ ವಾದವನ್ನು ಪುಷ್ಟೀಕರಿಸುವ ಸಲುವಾಗಿ, ಪ್ರಾಸಿಕ್ಯೂಷನ್ನು 16 ಜನ ಸಾಕ್ಷಿದಾರರನ್ನು ವಿಚಾರಣೆಮಾಡಿದ್ದಾರೆ. ಪ್ರಾಸಾ–1 ಮೃತರ ಸೋದರನಾಗಿದ್ದು, ಇವನು ನಿಶಾನೆ ಪಿ–21ರ ಪ್ರಕಾರ ದೂರನ್ನು ದಾಖಲಿಸಿದ್ದಾನೆ. ಅವನು, ಚೇತರಿಸಿಕೊಂಡ ನಂತರ, ಆಪಾದಿತನು, ಅವನ ಮೃತ ಸೋದರಿಯ ಶೀಲತ್ವವನ್ನು ಶಂಕಿಸಲು ಪ್ರಾರಂಭಿಸಿದ್ದು, ಆಪಾದಿತನನ್ನು ಚಿಕಿತ್ಸೆಗೆ ಕರೆದೊಯ್ಯಲಾಗುತ್ತಿತ್ತೆಂದು ಹೇಳಿಕೆ ನೀಡಿದ್ದಾನೆ. ಕೇರಳದಿಂದ ಬಂದ ನಂತರ ಮೃತಳು, ತನ್ನ ತಾಯಿಯ ಬಳಿ, ಆಪಾದಿತನು ತನ್ನ ಶೀಲತ್ವ ಶಂಕೆ ಮಾಡುತ್ತಿರುವನೆಂದು ಮತ್ತು ಕೆಟ್ಟದಾಗಿ ನಡೆಸಿಕೊಳ್ಳುತ್ತಿರುವನೆಂದು ಆಗಾಗ ಹೇಳಿಕೊಂಡಿದ್ದಾಳೆ. ಅಷ್ಟೇ ಅಲ್ಲದೆ ಅವನು, ಸುಮಾರು ಎರಡು ವರ್ಷಗಳ ಹಿಂದೆ, ರಾತ್ರಿ ಸುಮಾರು 8.30 ರಲ್ಲಿ, ಕ್ರಿಮಿನಲ್ ಸಾಕ್ಷಿದಾರನು, ಆಪಾದಿತನು ಮೃತಳು ಕತ್ತನ್ನು ಕೊಯ್ದಿರುವನೆಂದು ದೂರವಾಣಿ ಮೂಲಕ ತಿಳಿಸಿದ್ದನೆಂದು ಕೂಡಲೇ ಎರಡು ಟೆಂಪೊಗಳನ್ನು ಬಾಡಿಗೆಗೆ ತೆಗೆದುಕೊಂಡು ಮೃತಳ ಮನೆಗೆ ಹೋಗಿದ್ದು, ಅಲ್ಲಿ ಅವರು ಮೃತಳ ಮೃತದೇಹವನ್ನು ಕಂಡೆವೆಂದು ಮತ್ತು ಆಪಾದಿತನು ವಿಷವನ್ನು ಸೇವಿಸಿದ್ದರಿಂದ ಅವನನ್ನು ಆಸ್ಪತ್ರೆಗೆ ಕೊಂಡೊಯ್ಯಲಾಗಿತ್ತೆಂದು ಹೇಳಿಕೆ ನೀಡಿದ್ದಾನೆ. ಅಷ್ಟೇ ಅಲ್ಲದೆ, ಅವನು, ತಾನು ನಿಶಾನೆ ಪಿ.21ರ ಪ್ರಕಾರ ದೂರನ್ನು ದಾಖಲಿಸಿರುವುದಾಗಿ ಹೇಳಿಕೆ ನೀಡಿದ್ದಾನೆ. ಮರುದಿನ ಬೆಳಿಗ್ಗೆ ಪೊಲೀಸರು ಬಂದು ಸ್ಥಳ ಮಹಜ಼ರನ್ನು ಬರೆದರೆಂದು ಹೇಳಿಕೆನೀಡಿದ್ದಾನೆ. ಪ್ರಾಸಾ–1ರ ಪಾಟೀ–ಸವಾಲನ್ನು ನಡೆಸುವ ಸಮಯದಲ್ಲಿ, ಸಾಕ್ಷಿದಾರರ ಸಾಕ್ಷ್ಯವನ್ನು ಅಲಕ್ಷಿಸುವ ಸಲುವಾಗಿ ಹೆಚ್ಚಿಗೇನನ್ನೂ ಹೊರಗೆಡವಲಿಲ್ಲ.

9. ಪ್ರಾಸಾ-4 ಮೃತಳ ಮತ್ತು ಆಪಾದಿತನ ಮಗಳಾಗಿದ್ದಾಳೆ. ಇವಳು ಈ ಪ್ರಕರಣದಲ್ಲಿ ಪ್ರಮುಖ ಸಾಕ್ಷಿದಾರಳಾಗಿದ್ದಾಳೆ. ಅವಳು, ಅವಳ ಚಿಕ್ಕಪ್ಪನು ತಮ್ಮ ಮನೆಯ ಛಾವಣಿಯನ್ನು ತೆಗೆದಿದ್ದರಿಂದ ಅವಳ ಕುಟುಂಬ ಸದಸ್ಯರಿಗೆ ಯಾವುದೇ ವಾಸದ ಮನೆ ಇಲ್ಲದಿದ್ದುದರಿಂದ ಯಾವಾಗಲೂ ಅವಳ ತಾತ ಅಜ್ಜಿಯ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದೆವೆಂದು ಹೇಳಿಕೆನೀಡಿದ್ದಾಳೆ. ಅಷ್ಟೇ ಅಲ್ಲದೆ ಅವಳು, ಅವರು ತಾತ-ಅಜ್ಜಿಯ ಮನೆಯಲ್ಲಿ, ಉಳಿದುಕೊಂಡಿರುವಾಗ, ಅವನ ತಂದೆ-ತಾಯಿ ಎಂದರೆ ಆಪಾದಿತ ಮತ್ತು ಮೃತಳು ಯಾವಾಗಲೂ ಜಗಳ ಆಡುತ್ತಿದ್ದರೆಂದು, ಅವಳ ತಂದೆಯು ಯಾವಾಗಲೂ ಆಲ್ಕೋಹಾಲ್ ಕುಡಿದು ಬಂದು ಅವಳ ತಾಯಿಗೆ ಹೊಡೆಯುತ್ತಿದ್ದನೆಂದು ಹೇಳಿಕೆನೀಡಿದ್ದಾಳೆ. 01.10.2009 ರಂದು, ಅವಳ ತಾಯಿಯನ್ನು ಕೊಲೆಮಾಡಲಾಗಿದೆ. ಆ ಸದರಿ ದಿನಾಂಕದಂದು, ಅವರು, ಗ್ರಾಮಸ್ಥರು ಮೇಕೆಯನ್ನು ಕೊಯ್ದಿದ್ದರಿಂದ ಮಾಂಸವನ್ನು ತಂದಿದ್ದರು. ಸಾಯಂಕಾಲದ ಸಮಯದಲ್ಲಿ, ಆಹಾರವನ್ನು ತಯಾರಿಸಿದ ನಂತರ ಅವರು ಊಟವನ್ನು ಮಾಡಿದ್ದರು. ಇದಾದನಂತರ, ಮಲಗಿಕೊಳ್ಳಲು ಚಾಪೆಯನ್ನು ಅವರು ಎತ್ತಿಕೊಳ್ಳುವಾಗ, ಅವಳ ತಂದೆಯು, ಒಳಗೆ ನೀವು ಮಲಗಬಾರದೆಂದು ಮತ್ತು ಅವರಿಗೆ ಹೋಗಿ ಹೊರಗಡೆ ಮಲಗಬೇಕೆಂದು ಹೇಳಿದ್ದಾನೆ. ಅವನು, ನೀವು ಒಳಗಡೆ ಮಲಗಿದರೆ, ತಾನು ನಿಮ್ಮ ಕಾಲುಗಳನ್ನು ಕತ್ತರಿಸುತ್ತೇನೆಂದು ಹೆದರಿಸಿದ್ದಾನೆ. ಅಷ್ಟೇ ಅಲ್ಲದೆ, ಅವಳು, ತಾನು, ಅವಳ ಕಿರಿಯ ತಂಗಿ, ಕಿರಿಯ ತಮ್ಮ ಮತ್ತು ಅವಳ ಅಜ್ಜಿಯು ಹೋಗಿ ಹೊರಗಡೆ ಮಲಗಿಕೊಂಡಿದುದಾಗಿ ಹೇಳಿಕೆ ನೀಡಿದ್ದಾಳೆ. ಅವಳ ತಂದೆತಾಯಿಯರು ಮನೆಯ ಒಳಗಡೆ ಮಲಗಿಕೊಂಡಿದ್ದರು. ಅಷ್ಟೇ ಅಲ್ಲದೆ, ಅವಳು, ತಾವು ಹೊರಗಡೆ ನಿದ್ರಿಸುತ್ತಿದ್ದಾಗ, ಅವಳ ತಂದೆಯು ಹೊರಗಡೆ ಬಂದು, ಅವರು ನಿದ್ರಿಸುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಿದರೆಂದು ಹೇಳಿಕೆ ನೀಡಿದ್ದಾಳೆ. ಆ ಸಮಯದಲ್ಲಿ, ಅವಳು ನಿದ್ರಿಸುತ್ತಿದ್ದ ಹಾಗೆ ನಟಿಸಿದ್ದಾಳೆ. ಇದಾದನಂತರ, ರಾತ್ರಿ ಸುಮಾರು 8.30ರ ಸಮಯದಲ್ಲಿ, ಅವಳ ತಂದೆಯು ಸಿದ್ದರಾಜುರವರ ಅಂಗಡಿ ಬಳಿ ಹೋಗಿ, ತಾನು ಮೃತ ಜಯಮ್ಮಳ ಕುತ್ತಿಗೆ ಕತ್ತರಿಸಿ ಕೊಲೆ ಮಾಡಿದೆನೆಂದು ಕೂಗಿಕೊಂಡನೆಂದು ಮತ್ತು ಅವನು ತನ್ನ ದೇಹದ ಮೇಲೆ ತಾನೇ ಪಾಲಿಡಾಲ್‌ನ್ನು ಸಹ ಸುರಿದುಕೊಂಡನೆಂದು

ಹೇಳಿಕೆನೀಡಿದ್ದಾಳೆ. ಅವರೆಲ್ಲರೂ ಮನೆಯೊಳಗಡೆ ಹೋಗಿ ನೋಡಿದಾಗ, ಮೃತಳು ರಕ್ತದ ಮಡುವಿನಲ್ಲಿರುವುದನ್ನು ನೋಡಿದ್ದಾರೆ. ಅಷ್ಟೇ ಅಲ್ಲದೆ ಅವಳು, ಘಟನೆ ನಡೆದ ದಿನದಂದು ಆಪಾದಿತನು ಮಚ್ಚನ್ನು ಮಸೆಯುತ್ತಿದ್ದನು ಆದರೆ ಅವಳು ಅದನ್ನು ವಿಚಾರಿಸಿರಲಿಲ್ಲವೆಂದು ಹೇಳಿಕೆನೀಡಿದ್ದಾಳೆ. ಅವಳು ಸದರಿ ಮಚ್ಚನ್ನು ಮುದ್ದೆಮಾಲು ಸಂಖ್ಯೆ.5 ಎಂದೂ ಸಹ ಗುರುತಿಸಿದ್ದಾಳೆ. ಪಾಟೀ–ಸವಾಲು ನಡೆಯುವ ಅವಧಿಯಲ್ಲಿ, ಅವಳ ತಂದೆಗೆ ಕ್ಷಮೆ ನೀಡುವ ಸಂಬಂಧ ವಾದಿಸುತ್ತಿದ್ದಾಗ, ಅವಳೇ, ಅವಳ ತಾತನೇ ಅವಳ ಕಿರಿಯ ಸೋದರಿ ಮತ್ತು ಕಿರಿಯ ಸೋದರ ಹಾಜರಿದ್ದರೆಂದು ಪ್ರಾಸಾ–4 ಹೇಳಿಕೆ ನೀಡಿದ್ದಾರೆ ಮತ್ತು ಅವಳು ರಾತ್ರಿ ಸುಮಾರು 8.00 ಗಂಟೆಗೆ ಎದ್ದಾಗ, ಅವಳು ಅಂಗಡಿ ಬಳಿಹೋಗಿದ್ದು, ಅಲ್ಲಿ 20 ರಿಂದ 30 ಜನರು ಅಲ್ಲಿ ಸೇರಿಕೊಂಡಿದ್ದರೆಂದು ಹೇಳಿಕೆ ನೀಡಿದ್ದಾಳೆ. ಆಪಾದಿತನು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದನು. ಅವನು ಯಾವಾಗಲೂ ಹುಚ್ಚನಂತೆ ಮತ್ತು ವಿಚಿತ್ರ ರೀತಿಯಲ್ಲಿ ವರ್ತಿಸುತ್ತಿದ್ದನೆಂದು ಹೇಳುತ್ತಿದ್ದಾಗ, ಸದರಿ ಸಲಹೆಯನ್ನು ಈ ಸಾಕ್ಷಿದಾರಳು ನಿರಾಕರಿಸಿದ್ದಾಳೆ.

10. ಸಂಬಂಧಿಕರು ಮತ್ತು ಸ್ನೇಹಿತರು ಸದರಿ ಸಾಕ್ಷಿದಾರಳಿಗೆ ಪ್ರತಿಯೊಂದನ್ನು ಹೇಳಿಕೊಟ್ಟಿರುವ ಸಾಧ್ಯತೆಯಿರುವುದರಿಂದ ಪ್ರಾಸಾ–4 – ಜ್ಯೋತಿಯ ಸಾಕ್ಷ್ಯವು ನಂಬಿಕೆಯುಳ್ಳದ್ದಾಗಿರುವುದಿಲ್ಲ ಮತ್ತು ನಂಬಲು ಸಾಧ್ಯವಿಲ್ಲ. ಪ್ರಾಸಾ–4ರ ಸಾಕ್ಷ್ಯದಿಂದ ಕಂಡು ಬರಬಹುದಾದ ಹಾಗೆ ಅವಳು ಹೇಳಿರುವ ಸಂಗತಿಗಳ ಗುಣಮಟ್ಟ ಕುರಿತು ಇದನ್ನು ಮನದಟ್ಟು ಮಾಡಿಕೊಡಲಾಗಿದೆ. ಮಕ್ಕಳ ಸಾಕ್ಷಿದಾರ ಸಾಕ್ಷ್ಯವನ್ನು ನಿರಾಕರಿಸುವ ಅಗತ್ಯವಿರುವುದಿಲ್ಲ ಆದರೆ ದೂರದೃಷ್ಟಿಯ ಕಾನೂನಿನಂತೆ ನ್ಯಾಯಾಲಯವು, ಹತ್ತಿರದಿಂದ ಪರಿಷ್ಕರಿಸಿ ಅದರಿಂದಲೇ ಅಂಥ ಸಾಕ್ಷ್ಯವನ್ನು ಪರಿಗಣಿಸಬೇಕು ಎಂಬುದು ಸುಸ್ಥಾಪಿತ ತತ್ವವಾಗಿದೆ ಮತ್ತು ಅದರ ಗುಣಮಟ್ಟ ಮತ್ತು ನಂಬಿಕೆಯ ಬಗ್ಗೆ ಮನದಟ್ಟು ಮಾಡಿಕೊಂಡ ನಂತರವಷ್ಟೇ ಇದು ಆಪಾದಿತನ ಅಪರಾಧ ನಿರ್ಣಯವನ್ನು ದಾಖಲಿಸಬಹುದು. ಕಾನೂನಿನ ಈ ಪ್ರಸ್ತಾಪವನ್ನು, ***ಗೊಲ್ಲ ಯೆಲುಗು ಗೋವಿಂದು –ವಿರುದ್ಧ– ಆಂಧ್ರಪ್ರದೇಶ ರಾಜ್ಯ***[3],

ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೇಳಿದ್ದು, ಇದರಲ್ಲಿ ಕಂಡಿಕೆ–9ರಲ್ಲಿ, ಇದು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ.

> *"9. ಮಗುವಿನ ಸಾಕ್ಷ್ಯವು ಸಾಕಷ್ಟು ಬುದ್ಧಿಯನ್ನು ಹೊಂದಿದೆಯೇ ಎಂಬ ಪ್ರಶ್ನೆಗೆ ಸಂಬಂಧಿಸಿದ ನಿರ್ಣಯವು ಮೊದಲನೆಯದಾಗಿ, ಅಧಿವಿಚಾರಣಾ ನ್ಯಾಯಾಧೀಶರನ್ನು ಅವಲಂಬಿಸಿದ್ದು, ಇವರು, ಅವನ ವಿಧಾನಗಳನ್ನು, ಅವನಲ್ಲಿ ಕಂಡುಬರುವ ಗ್ರಹಣಶಕ್ತಿಯನ್ನು ಗಮನಿಸಿರುವರು, ಮತ್ತು ಸದರಿ ನ್ಯಾಯಾಧೀಶರು; ಅವನ ಸಾಮರ್ಥ್ಯ ಮತ್ತು ಬುದ್ಧಿವಂತಿಕೆಯನ್ನು ಹಾಗೂ ಪ್ರಮಾಣಮಾಡಿದ ಹೊಣೆಗಾರಿಕೆಯಲ್ಲಿ ಅವನ ತಿಳಿವಳಿಕೆ ಪ್ರಕಟಪಡಿಸಲು ಅನುಕೂಲವಾಗುವ ಯಾವುದೇ ವಿಚಾರಣೆಯನ್ನು ಅವಲಂಬಿಸಬಹುದು. ಆದಾಗ್ಯೂ, ದಾಖಲೆಗಳಲ್ಲಿ ಏನನ್ನು ಇಡಲಾಗಿದೆಯೋ ಅದರಿಂದ, ಅವನ ಹೇಳಿಕೆಯು ತಪ್ಪಾಗಿದೆಯೆಂಬುದು ಸ್ಪಷ್ಟವಾದರೆ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯಕ್ಕೆ ಉನ್ನತ ನ್ಯಾಯಾಲಯವು ತಡೆಯೊಡ್ಡಬಹುದು. ಈ ಮುಂಜಾಗರೂಕತೆಯು ಅವಶ್ಯವಾದುದು. ಏಕೆಂದರೆ ಸಾಕ್ಷಿದಾರ ಮಗುವಿಗೆ ಹೇಳಿಕೊಡಲು ಅವಕಾಶವಿರಬಹುದಾಗಿದೆ. ಸಾಕ್ಷಿದಾರ ಮಕ್ಕಳನ್ನು ಸುಲಭವಾಗಿ ಹೇಳಿಕೊಡುವ ಮೂಲಕ ಬಗ್ಗಿಸಬಹುದು ಮತ್ತು ಪ್ರಭಾವಕ್ಕೆ ಒಳಪಡಿಸಬಹುದಾಗಿರುವುದರಿಂದ, ಇವರು ಅಪಾಯಕಾರಿ ಎನ್ನುವುದನ್ನು ರುಜುವಾತುಪಡಿಸಿದರೂ ಕೂಡ, ಅವರನ್ನು ನಿರ್ದೇಶಿಸಬಹುದು ಮತ್ತು ಒಂದು ರೂಪಕೊಡಬಹುದು. ಆದರೆ ಇದೂ ಕೂಡ ಒಂದು ಒಪ್ಪಿತ ಮಾದರಿಯಾಗಿದ್ದು, ಅವರ ಸಾಕ್ಷ್ಯವನ್ನು ಎಚ್ಚರಿಕೆಯಿಂದ ಪರಿಷ್ಕರಿಸಿದ ನಂತರ ನ್ಯಾಯಾಲಯವು, ಇದರಲ್ಲಿ ಸತ್ಯದ ಪ್ರಭಾವವಿದೆಯೆನ್ನುವ ನಿರ್ಣಯಕ್ಕೆ ಬಂದರೆ, ಸಾಕ್ಷಿದಾರ*

3. ಎಐಆರ್ 2008 ಎಸ್‌ಸಿ 1842

*ಮಗುವಿನ ಸಾಕ್ಷ್ಯವನ್ನು ಒಪ್ಪಿಕೊಳ್ಳುವ ಮಾರ್ಗದಲ್ಲಿ ಯಾವುದೇ ಅಡೆತಡೆಯಿರುವುದಿಲ್ಲ."*

11. ಕಾನೂನಿನ ಸದರಿ ಪ್ರಸ್ತಾಪವನ್ನು ದೃಷ್ಟಿಯಲ್ಲಿಟ್ಟುಕೊಂಡು, ಪ್ರಾಸಾ–4ರ ಸಾಕ್ಷ್ಯವನ್ನು ಕೂಲಂಕಷವಾಗಿ ಪರಿಶೀಲಿಸಿದರೆ, ಪಾಟೀ–ಸವಾಲಿನಲ್ಲಿ, ಸದರಿ ಸಾಕ್ಷಿದಾರರಿಗೆ, ಹೇಳಿಕೊಡಲಾಗಿದೆ ಆದರೆ, ಈ ಸಾಕ್ಷಿದಾರನ ಸಾಕ್ಷ್ಯ ಸಹಜವಾಗಿದೆ ಮತ್ತು ಸಂಭವವಿದೆಯೆಂಬುದನ್ನು ತೋರಿಸಲು ದಾಖಲೆಯಲ್ಲಿ ಅಂಥ ಮಾಹಿತಿಯನ್ನು ತಂದಿರುವುದಿಲ್ಲ.

12. ಆಪಾದಿತನ ತಾಯಿಯಾದ ಪ್ರಾಸಾ–6ರ ಸಾಕ್ಷ್ಯವನ್ನು ನಾವು ಅವಲೋಕಿಸಿದಾಗಲೂ ಕೂಡ, ಅವಳು, ಆಪಾದಿತ ಮತ್ತು ಮೃತಳ ನಡುವೆ ಸಣ್ಣಪುಟ್ಟ ಜಗಳಗಳು ಆಗಾಗ ನಡೆಯುತ್ತಿದ್ದವೆಂದು ಹೇಳಿಕೆನೀಡಿದ್ದಾಳೆ. ಆಪಾದಿತ, ಮೃತಳು ಮತ್ತು ಅವರ ಮಕ್ಕಳು ಅವಳೊಂದಿಗೆ ವಾಸಿಸುತ್ತಿದ್ದರು. ಘಟನೆ ನಡೆದ ದಿನಾಂಕದಂದು, ರಾತ್ರಿವೇಳೆಯಲ್ಲಿ, ಅವಳು ಮತ್ತು ಅವಳ ಮೊಮ್ಮಕ್ಕಳು ಹೊರಗಡೆ ಮಲಗುತ್ತಿದ್ದರು ಮತ್ತು ಮನೆಯೊಳಗಡೆ ಯಾರು ಮಲಗಿದ್ದರೆಂಬುದನ್ನು ತಾನು ಗಮನಿಸಿರಲಿಲ್ಲ. ಅಷ್ಟೇ ಅಲ್ಲದೆ, ಅವಳು, ಆಪಾದಿತನು, ತಮ್ಮೊಂದಿಗೆ ಊಟ ಮಾಡುತ್ತಿದ್ದನೆಂದೂ, ಮಾರನೇ ದಿನ ಬೆಳಿಗ್ಗೆ ಸುಮಾರು 9.00 ಗಂಟೆಯಲ್ಲಿ ಜನ ಸೇರಿದ್ದು, ಮೃತಳು ಕೊಲೆಯಾಗಿರುವಳೆಂದು ತಿಳಿಸಿದರೆಂದು ಹೇಳಿಕೆನೀಡಿದ್ದಾಳೆ. ಈ ಸಾಕ್ಷಿದಾರಳನ್ನು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಲಾಗಿದೆ. ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀ–ಸವಾಲನ್ನು ನಡೆಸುವ ಅವಧಿಯಲ್ಲಿ ಅವಳು, ದಿನಾಂಕ 01.10.2009 ರಂದು, ಅವರು ತಮ್ಮ ಗ್ರಾಮದಲ್ಲಿ ಮೇಕೆಯನ್ನು ಕೊಯ್ದಿದ್ದು, ಮಾಂಸವನ್ನು ತಂದು, ಊಟವನ್ನು ತಯಾರಿಸಿದುದು ನಿಜವೆನ್ನುವ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದಾಳೆ. ಸ್ವತಃ ಅವಳು, ಆಪಾದಿತ, ಮೃತಳು ಮತ್ತು ಮೊಮ್ಮಕ್ಕಳು ಒಟ್ಟಿಗೆ ಊಟವನ್ನು ಮಾಡಿದ್ದರೆಂದೂ ಇದಾದನಂತರ ಮಾಮೂಲಿನಂತೆ, ಅವಳು ಮತ್ತು ಅವಳ ಮೊಮ್ಮಕ್ಕಳು ಮನೆಯೊಳಗೆ ಮಲಗಲು ಚಾಪೆ ಹಾಸಿದರೆಂದು ಹೇಳಿಕೆನೀಡಿದ್ದಾಳೆ. ಬೇರೆ ಅಭಿಪ್ರಾಯಗಳನ್ನು ಈ ಸಾಕ್ಷಿದಾರಳು ನಿರಾಕರಿಸಿದ್ದಾಳೆ.

13. ಆಪಾದಿತನು ಮೃತಳ ಶೀಲವನ್ನು ಶಂಕಿಸುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಪ್ರಾಸಾ-1, ಮೃತಳ ಸಹೋದರನು, ಆಪಾದಿತನು ತನ್ನ ಪತ್ನಿಯ ಶೀಲವನ್ನು ಶಂಕಿಸುತ್ತಿದ್ದನೆಂದು ಹೇಳಿಕೆನೀಡಿದ್ದಾನೆ. ಅವನು ಆಗಾಗ ಗಲಾಟೆಯನ್ನು ಮಾಡುತ್ತಿದ್ದು, ಸದರಿ ಸಂಗತಿಯನ್ನು, ಆಪಾದಿತಳು ತನ್ನ ತಾಯಿಗೆ ಆಗಾಗ ತಿಳಿಸುತ್ತಿದ್ದಳೆಂದು ಹೇಳಿಕೆನೀಡಿದ್ದಾನೆ. ಅಷ್ಟೇ ಅಲ್ಲದೆ, ಅವನು, ಸುಮಾರು ಎರಡು ವರ್ಷಗಳ ಹಿಂದೆ, ರಾತ್ರಿ ಸುಮಾರು 8.30 ರಲ್ಲಿ ಅಪರಾಧಿಕ ಸಾಕ್ಷ್ಯ-12, ದೂರವಾಣಿಯ ಮುಖಾಂತರ, ಆಪಾದಿತನು ಮೃತಳು ಕುತ್ತಿಗೆಯನ್ನು ಕತ್ತರಿಸಿರುವನೆಂದು ಮತ್ತು ಕೂಡಲೇ ಎರಡು ಟೆಂಪೊಗಳನ್ನು ಬಾಡಿಗೆಗೆ ತೆಗೆದುಕೊಂಡು ತಾವು ಮೃತಳ ಮನೆಗೆ ಹೋದೆವೆಂದು, ಅಲ್ಲಿ ನಾವು ಮೃತಳ ಮೃತದೇಹವನ್ನು ನೋಡಿದೆವೆಂದು, ಆಪಾದಿತನು ವಿಷವನ್ನು ಸೇವಿಸಿದ್ದರಿಂದ ಅವನನ್ನು ಆಸ್ಪತ್ರೆಗೆ ಕೊಂಡೊಯ್ಯಲಾಗಿತ್ತೆಂದು ಹೇಳಿಕೆನೀಡಿದ್ದಾನೆ.

14. ಆಪಾದಿತನನ್ನು ಪರೀಕ್ಷಿಸಿದ ವೈದ್ಯ-ಪ್ರಾಸಾ-15ರ ಸಾಕ್ಷ್ಯವನ್ನು ನಾವು ಅವಗಾಹಿಸಿದರೆ, ಅವರು, ದಿನಾಂಕ 02.10.2009 ರಂದು ಬೆಳಿಗ್ಗೆ ಸುಮಾರು 1.20ರಲ್ಲಿ ಆಪಾದಿತನನ್ನು ತಾನು ಪರೀಕ್ಷೆ ಮಾಡಿದೆನೆಂದು, ಅವನ ಆರೋಗ್ಯ ಸಾಮಾನ್ಯವಾಗಿದ್ದು, ಅವನನ್ನು ಬೆಳಿಗ್ಗೆ ಸುಮಾರು 6.30ರಲ್ಲಿ ಬಿಡುಗಡೆ ಮಾಡಿದೆವೆಂದು ಹೇಳಿಕೆನೀಡಿದ್ದಾರೆ. ಮೃತರ ಮೃತದೇಹವನ್ನು ಸಂಪೂರ್ಣವಾಗಿ ಶವಪರೀಕ್ಷೆಯನ್ನು (autopsy) ಮಾಡಿರುವ ವೈದ್ಯರು, ಮೃತರು, ಅವಳ ಕುತ್ತಿಗೆಯನ್ನು ಕತ್ತರಿಸಿದ ಕಾರಣದಿಂದ ಕತ್ತು ಕತ್ತರಿಸಿದ ಗಾಯಗಳ ಕಾರಣದಿಂದ ಮೃತಳಾಗಿರುವಳು ಎಂದು ಸ್ಪಷ್ಟವಾಗಿ ಹೇಳಿಕೆನೀಡಿದ್ದಾರೆ. ಪೊಲೀಸು ನಿರೀಕ್ಷಕರಾದ ಪ್ರಾಸಾ-16 ಕೂಡ, ಆಪಾದಿತನನ್ನು ಬಂಧಿಸಿದ ಕೂಡಲೇ ನಿಶಾನೆ.ಪಿ 23ರ ಪ್ರಕಾರ ಆಪಾದಿತನ ಸ್ವಇಚ್ಛೆಯ ಹೇಳಿಕೆಯನ್ನು ದಾಖಲಿಸಿದ್ದು, ಪಂಚ ಸಾಕ್ಷಿದಾರರ ಸಮ್ಮುಖದಲ್ಲಿ, ಅವರು, ನಿಶಾನೆ ಪಿ-11ರ ಪ್ರಕಾರ ಮಹಜರನ್ನು ರೇಖಿಸುವ ಮೂಲಕ ಮಚ್ಚನ್ನು ಸ್ವಾಧೀನಪಡಿಸಿಕೊಂಡಿದ್ದು, ಮಚ್ಚು-ಮುದ್ದೆಮಾಲಿನ ಸಂ.5ನ್ನು ವಶಪಡಿಸಿಕೊಂಡಿದ್ದಾರೆ. ಪ್ರಾಸಾ-4, 5, 6, 7 ಮತ್ತು 8 ರಿಂದ 14 ರವರೆಗಿನ ಸಾಕ್ಷ್ಯಗಳು ಪ್ರಾಸಿಕ್ಯೂಷನ್‌ನ

ವಾದವನ್ನು ಬೆಂಬಲಿಸದಿದ್ದರೂ, ಪ್ರತಿಕೂಲವೆಂದು ಭಾವಿಸಿದ್ದರೂ, ಆಪಾದಿತನು ಬೆಳಿಗ್ಗೆ ಸುಮಾರು 8.30ರಲ್ಲಿ ಮಲಗುವ ಕೋಣೆಯೊಳಗೆ ಮೃತರೊಟ್ಟಿಗೆ ಮಲಗಿದ್ದದ್ದು ಕಂಡುಬಂದಿದೆಯೆಂದು ಹೇಳಲಾದ ಪ್ರಾಸಾ–4ರ ಸಾಕ್ಷ್ಯವು ಸುಸಂಗತವಾಗಿದೆ. ಆಪಾದಿತನು ಹೊರಗಡೆ ಬಂದು, ತಾನು ಮೃತ ಜಯಮ್ಮಳನ್ನು ಅವಳ ಕತ್ತನ್ನು ಕತ್ತರಿಸುವ ಮೂಲಕ ಕೊಲೆ ಮಾಡಿದ್ದೇನೆಂದು ಹೇಳಿದನೆಂದು ಅವಳೂ ಕೂಡ ಹೇಳಿಕೆ ನೀಡಿದ್ದಾಳೆ. ಸದರಿ ಸಂಗತಿಯು ಯಾವ ರೀತಿಯಲ್ಲೂ ಲೆಕ್ಕಕ್ಕೆ ಬರುವುದಿಲ್ಲ, ಆದಾರೂ, ನ್ಯಾಯಿಕೇತರ ತಪ್ಪೊಪ್ಪಿಗೆಯಾಗುತ್ತದೆ. ಪ್ರಾಸಾ–4ರ ಸಾಕ್ಷ್ಯವೂ ಕೂಡ, ಮೃತರ ಮೃತದೇಹದ ಶವಪರೀಕ್ಷೆಯನ್ನು (autopsy) ನಡೆಸಿರುವ ವೈದ್ಯರ ಸಾಕ್ಷ್ಯಕ್ಕೆ ಸಮರ್ಥನೆ ನೀಡುತ್ತದೆ. ಪ್ರಾಸಿಕ್ಯೂಷನ್ನ ಸಾಕ್ಷ್ಯದಲ್ಲಿಯೂ ಕೂಡ, ಮೃತರನ್ನು ಉಪೇಕ್ಷಿಸುವಷ್ಟರಮಟ್ಟಿಗೆ ಕೆಲವು ಇತರ ವ್ಯಕ್ತಿಗಳು ಕೆಟ್ಟಭಾವನೆಯನ್ನು ಹೊಂದಿದ್ದರು ಎಂಬುದನ್ನು ತೋರಿಸಲು ದಾಖಲೆಯಲ್ಲಿ ಏನನ್ನೂ ತಂದಿರುವುದಿಲ್ಲ. ಅವನು ಆಪಾದಿತ ಅಪರಾಧವನ್ನು ಮಾಡಿದ್ದರೆ ಆಪಾದಿತನ ಸ್ವಂತ ಮಗಳಾಗಿರುವ ಪ್ರಾಸಾ–4ನ್ನು ಮೂರನೇ ವ್ಯಕ್ತಿಯಂತೆ ಪರಿಗಣಿಸಲಾಗುವುದಿಲ್ಲ ಮತ್ತು ತನ್ನ ಸ್ವಂತ ತಂದೆಯೊಂದಿಗೆ ಸೇರುತ್ತಿದ್ದಳು. ನಿಜವಾದ ತಪ್ಪಿತಸ್ಥರನ್ನು ಹಾಗೆಯೇ ಬಿಡಬಾರದು, ಮುಗ್ಧ ವ್ಯಕ್ತಿಯನ್ನು ಅಪರಾಧದಲ್ಲಿ ಸಿಕ್ಕಿಸಬಾರದು ಎಂಬ ಕಾನೂನಿನ ತತ್ವವು ಸುಸ್ಥಾಪಿತವಾಗಿದೆ. ಆ ಹಿನ್ನೆಲೆಯಲ್ಲಿ, ಪ್ರಾಸಿಕ್ಯೂಷನ್ನು ಯುಕ್ತ ಎಲ್ಲಾ ಸಂದೇಹವನ್ನು ಮೀರಿ ಆಪಾದಿತನ ಅಪರಾಧವನ್ನು ರುಜುವಾತುಪಡಿಸಿದೆ ಎಂದು ಅಭಿಪ್ರಾಯಪಡುವುದು ಒಳ್ಳೆಯದು.

15. ಅಪೀಲುದಾರ–ಆಪಾದಿತನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ಪರ್ಯಾಯ ವಾದವೇನೆಂದರೆ, ಆಪಾದಿತನು ಆಪಾದಿತ ಅಪರಾಧವನ್ನು ಮಾಡಿದ್ದರೂ ಕೂಡ, ಅವನು ಯಾವುದೇ ಅಪರಾಧಿಕ ಮನಸ್ಸುಳ್ಳವನಾಗಿರಲಿಲ್ಲ ಎಂಬುದಾಗಿದೆ. ಆಪಾದಿತ ಘಟನೆ ನಡೆದ ಸಮಯದಲ್ಲಿ, ಅವನು ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದುದರಿಂದ ಅವನು ಭಾರತೀಯ ದಂಡ ಸಂಹಿತೆಯ 84ನೇ ಪ್ರಕರಣದ ಮೇರೆಗಿನ ಪ್ರಯೋಜನಕ್ಕೆ ಹಕ್ಕುಳ್ಳವನಾಗಿದ್ದಾನೆ. ಸಂಕ್ಷಿಪ್ತತೆಯ ಉದ್ದೇಶಕ್ಕಾಗಿ, ನಾವು, ಭಾರತೀಯ ದಂಡ ಸಂಹಿತೆಯ 84ನೇ ಪ್ರಕರಣವನ್ನು ಉದ್ಧರಿಸಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ:–

*84. **ಅಸ್ವಸ್ಥ ಮನಸ್ಸಿನ ವ್ಯಕ್ತಿಯ ಕೃತ್ಯ.**– ಒಂದು ಕೃತ್ಯವನ್ನು ಮಾಡುವಾಗ ಮನಸ್ಸಿನ ಅಸ್ವಾಸ್ಥ್ಯದ ಕಾರಣದಿಂದ ಆ ಕೃತ್ಯದ ಸ್ವರೂಪವನ್ನು ಅಥವಾ ತಾನು ಮಾಡುತ್ತಿರುವ ಆ ಕೃತ್ಯವು ಅಕ್ರಮವಾದುದು ಅಥವಾ ಕಾನೂನಿಗೆ ವಿರುದ್ಧವಾದುದು ಎಂಬುದನ್ನು ತಿಳಿಯಲು ಅಸಮರ್ಥವಾದ ವ್ಯಕ್ತಿಯು ಮಾಡಿದ ಯಾವುದೇ ಕೃತ್ಯವು ಅಪರಾಧವಾಗುವುದಿಲ್ಲ.*

16. ಮೇಲೆ ಹೇಳಲಾದ ಕಾನೂನಿನ ಉಪಬಂಧವನ್ನು ದೃಷ್ಟಿಯಲ್ಲಿಟ್ಟುಕೊಂಡು, ಅಪೀಲುದಾರ–ಆಪಾದಿತನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ನಿವೇದನೆಯೇನೆಂದರೆ ಆಪಾದಿತನು ಮಾನಸಿಕ ಕಾಯಿಲೆಯಾಗಿರುವ ಪ್ಯಾರಾನಾಯ್ಡ್ ಸ್ಕಿಜೊಫ್ರೇನಿಯಾದಿಂದ ಬಳಲುತ್ತಿದ್ದು, ವ್ಯಕ್ತಿಯು ಪ್ಯಾರಾನಾಯ್ಡ್ ಭ್ರಾಂತಿನಲ್ಲಿದ್ದಾಗ, ಅವನ ಚಟುವಟಿಕೆಗಳ ಬಗ್ಗೆ ಸಂಪೂರ್ಣ ಅರಿವಿರಲಿಲ್ಲದಿದ್ದುದರ ಪರಿಣಾಮ ಇದಾಗಿದೆ ಎಂಬುದಾಗಿದೆ. ಸ್ಕಿಜೊಫ್ರೇನಿಯಾ ಯಾಕೆ ಬರುತ್ತದೆಂಬ ಕಾರಣವು, ಇದುವರೆಗೂ ಅರಿವಿಗೆ ಬಂದಿಲ್ಲ ಆದರೆ ಅನುವಂಶೀಯತೆಯ ಒಂದು ಭಾಗವಾಗಿ ಅದು ಬರಬಹುದಾಗಿದೆ. ಬಹುತೇಕ ಪ್ರಕರಣಗಳಲ್ಲಿ, ಪ್ಯಾರಾನಾಯ್ಡ್ ಸ್ಕಿಜೊಫ್ರೇನಿಯಾವು, ಹೆಚ್ಚಾಗಿ ನಾಲ್ಕನೇ ದಶಕದಿಂದ ಪ್ರಾರಂಭವಾಗಿದ್ದು, ಗುಪ್ತವಾಗಿ ಬೆಳೆದಿದೆ. ಸಂದೇಹ ಪಡುವುದು ಇದರ ಪ್ರಾರಂಭಿಕ ಹಂತದ ರೋಗಲಕ್ಷಣವಾಗಿದ್ದು, ತದನಂತರ ಇದು, ಪೀಡನೆಯ ಭ್ರಮೆ ಕ್ರಮೇಣ ಬೆಳೆಯುತ್ತದೆ. ಅಷ್ಟೇ ಅಲ್ಲದೆ, ಅವರು, ಈ ಬಗ್ಗೆ ಆಪಾದಿತನನ್ನು ಪರಿಶೀಲಿಸಿದ ಪ್ರತಿವಾದಿ ಸಾಕ್ಷ್ಯ–1 – ಡಾ|| ಸುರೇಶ್ ಬಡದ್‌ಮಠ್‌ರವರ ಸಾಕ್ಷ್ಯವು ಇವರ ವಾದವನ್ನು ಸಮರ್ಥಿಸುತ್ತದೆ.

17. ತಮ್ಮ ಪ್ರತಿವಾದವನ್ನು ರುಜುವಾತುಪಡಿಸಲು, ಆಪಾದಿತನನ್ನು ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಮನೋವೈದ್ಯಕೀಯ ಹೆಚ್ಚುವರಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿರುವ ಪ್ರತಿವಾದಿ ಸಾಕ್ಷ್ಯ–1 – ಡಾ|| ಸುರೇಶ್ ಬಡದ್‌ಮಠ್‌ರವರನ್ನು ವಿಚಾರಣೆಮಾಡಿದ್ದು, ಅವರು, ಮೊದಲ ಬಾರಿಗೆ ಆಪಾದಿತನು

ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ದಿನಾಂಕ: 09.09.2009 ರಂದು ಮೊದಲಬಾರಿಗೆ ಒಳರೋಗಿಯಾಗಿ ಪ್ರವೇಶ ಪಡೆದಿದ್ದ, ವೈದ್ಯಕೀಯ ಸಲಹೆಗೆ ವಿರುದ್ಧವಾಗಿ, ಆಪಾದಿತನ ಕುಟುಂಬ ಸದಸ್ಯರು 15.09.2009 ರಂದು ಬಿಡುಗಡೆ ಮಾಡಿಸಿಕೊಂಡಿದ್ದಾರೆ. ದಿನಾಂಕ:15.06.2009 ರಂದು ಆಪಾದಿತನನ್ನು ಅವನಿಗೆ ಮೂರು ಬಾರಿ ಇಸಿಟಿ (ಎಲೆಕ್ಟ್ರೊ ಕನ್‌ವಲ್ಸಿವ್ ಥೆರಪಿ) ಮಾಡಿಸಿಕೊಳ್ಳಲು ಸೂಚಿಸಲಾಗಿತ್ತು. ದಿನಾಂಕ 09.03.2010 ರಂದು ಆಪಾದಿತನ ಕುಟುಂಬ ಸದಸ್ಯರು ಮತ್ತೆ ಅವನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು ಮತ್ತು ಅವನು 24.04.2010 ರವರೆಗೆ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿದ್ದನು. ದಿನಾಂಕ 11.07.2010 ರಂದು ಪುನಃ ಅವನನ್ನು ಆಸ್ಪತ್ರೆಗೆ ಕರೆತಂದಿದ್ದು ಅವನನ್ನು ದಿನಾಂಕ 13.07.2010 ರಂದು ಬಿಡುಗಡೆಗೊಳಿಸಲಾಗಿತ್ತು. ಅಷ್ಟೇ ಅಲ್ಲದೆ ಪ್ರತಿವಾದಿ ಸಾಕ್ಷ್ಯ–1 ನ್ಯಾಯಾಲಯದ ಆದೇಶದ ಪ್ರಕಾರ ಆಪಾದಿತನನ್ನು 19.11.2010 ರಂದು ದಾಖಲಿಸಿಕೊಳ್ಳಲಾಗಿತ್ತು ಮತ್ತು 08.12.2010 ರಂದು ಬಿಡುಗಡೆಗೊಳಿಸಲಾಗಿತ್ತು. ಪುನಃ ಜೈಲಿನ ಅಧಿಕಾರಿಗಳು 11.05.2011 ರಂದು ದಾಖಲುಮಾಡಿದ್ದು 19.05.2011 ರಂದು ಪ್ರತಿವಾದಿ ಸಾಕ್ಷ್ಯ–1, ನಿಶಾನೆ ಡಿ1ರ ಪ್ರಕಾರ ರೋಗಿ ವಿವರಪಟ್ಟಿಯನ್ನೂ (case sheet) ಸಹ ಹಾಜರುಪಡಿಸಲಾಗಿತ್ತು. ಅಷ್ಟೇ ಅಲ್ಲದೆ, ಅವನು, ಆಪಾದಿತನು ತಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವನೆಂದು ಮತ್ತು ಅವನಿಗೆ ಎರಡು ಬಗೆಯ ಎಂದರೆ i) ಪ್ಯಾರಾನಾಯ್ಡ್ ಸ್ಕಿಜೋಫ್ರೇನಿಯಾ ii) ಮದ್ಯಸಾರ ಹಾನಿ ಬಳಕೆ ಎಂಬ ಮಾನಸಿಕ ಕಾಯಿಲೆಗಳಿದ್ದವು. ಆಪಾದಿತನು ಕಾಯಿಲೆಯ ಲಕ್ಷಣಗಳನ್ನು ಹೊಂದಿದ್ದು, ತನ್ನ ಪತ್ನಿಯ ಶೀಲವನ್ನು ಶಂಕಿಸುತ್ತಲೇ ಇದ್ದನು. ಅವನು, ಜನರು ತನ್ನ ಬಗ್ಗೆಯೇ ಮಾತನಾಡುತ್ತಿರಬಹುದು ಎಂಬ ಸಂದೇಹವನ್ನು ಹೊಂದಿದ್ದು; ಜನರು ತನ್ನನ್ನು ಕೊಲ್ಲಬಹುದು ಎಂಬ ಭಯವನ್ನು ಸಹ ಹೊಂದಿದ್ದನು ಮತ್ತು ಆತ್ಮಹತ್ಯೆ ಮಾಡಿಕೊಳ್ಳುವ ಪ್ರವೃತ್ತಿಯನ್ನು ಹೊಂದಿದ್ದು ಖಿನ್ನತೆಯುಳ್ಳವನಾಗಿದ್ದನು. ಈ ಕಾರಣದಿಂದ ಅವನು ಆಗಾಗ ಮದ್ಯವನ್ನು ಸೇವಿಸುತ್ತಿದ್ದನು. ಅಷ್ಟೇ ಅಲ್ಲದೆ ಅವನು, ಮೊದಲ ಬಾರಿಗೆ ಆಸ್ಪತ್ರೆಯಲ್ಲಿ ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿದ್ದಾಗ, ತಾನು ಗಂಭೀರ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದು, ಹಾಗಾಗಿ ತಾನು ಇಸಿಟಿ ಚಿಕಿತ್ಸೆಗೊಳಗಾಗಿದ್ದನೆಂದು ಹೇಳಿಕೆನೀಡಿದ್ದಾನೆ. ಅಷ್ಟೇ ಅಲ್ಲದೆ ಅವನು

ಅವನಿಗೆ ಅಗತ್ಯಪಡಿಸಲಾಗಿದ್ದ ಚಿಕಿತ್ಸೆಯಾದ್ಯಂತ ಎರಡನೇ ಗುಂಪಿನ ಪ್ರವೃತ್ತಿಯನ್ನು ಹೊಂದಿದ್ದನೆಂದು ಹೇಳಿಕೆನೀಡಿದ್ದಾನೆ. ಅಷ್ಟೇ ಅಲ್ಲದೆ ಅವನು, ಔಷಧವನ್ನು ನಿಲ್ಲಿಸಿದ್ದರಿಂದ ಸದರಿ ಕಾಯಿಲೆಯು ಹೆಚ್ಚಾಗಿ ಸದರಿ ಹಂತವನ್ನು ತಲುಪಿದ್ದನೆಂದು ಹೇಳಿಕೆನೀಡಿದ್ದಾನೆ. ಸದರಿ ಕಾಯಿಲೆಯು ಅನುವಂಶೀಯವಾದುದಾಗಿದೆ. ಅಷ್ಟೇ ಅಲ್ಲದೆ ಅವನು, ತನ್ನ ತಾಯಿಯೂ ಮಾನಸಿಕ ಕಾಯಿಲೆಯನ್ನು ಹೊಂದಿದ್ದು ಆಸ್ಪತ್ರೆಯಲ್ಲಿ ದಾಖಲೆಯಿದೆಯೆಂದು ಹೇಳಿಕೆನೀಡಿದ್ದಾನೆ. ಅಷ್ಟೇ ಅಲ್ಲದೆ ಆಪಾದಿತನನ್ನು ಮೊದಲಬಾರಿಗೆ ಕರೆತಂದಿದ್ದಾಗ, ಅವನು ಯಾರ ಮಾತನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲವೆಂದು ಹೇಳಿಕೆನೀಡಿದ್ದಾನೆ. ಸದರಿ ಕಾಯಿಲೆಯ ಅವಧಿಯಲ್ಲಿ, ಅವನು ತಾನೇನು ಕೃತ್ಯ ಮಾಡುವೆನೆಂಬುದನ್ನು ತಿಳಿದುಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಅಷ್ಟೇ ಅಲ್ಲದೆ, ಅವನು, ಆಪಾದಿತನ ಘಟನೆ ನಡೆದ ಸಮಯದಲ್ಲಿ ಆಪಾದಿತನ ಸ್ಥಿತಿ ಹೇಗಿತ್ತು ಎಂಬ ಬಗ್ಗೆ ಅವನು ಹೇಳಲು ಆಗಿರಲಿಲ್ಲವೆಂದು ಹೇಳಿಕೆನೀಡಿದ್ದಾನೆ. ಪಾಟೀ–ಸವಾಲು ನಡೆಯುವ ಅವಧಿಯಲ್ಲಿ, ಪ್ರತಿವಾದಿ ಸಾಕ್ಷ್ಯ–1, ದಿನಾಂಕ 14.09.2009 ರಂದು, ಆಪಾದಿತನಲ್ಲಿ ಸುಧಾರಣೆಯ ಗುರುತುಗಳಿದ್ದವೆಂದು, ಅವನನ್ನು ಕಾಯುವ ಮೂಲಕ ನೋಡಿಕೊಳ್ಳುವ ಅಗತ್ಯವಿರಲಿಲ್ಲವೆಂದು ಹೇಳಿಕೆ ನೀಡಿದ್ದಾನೆ. ಅಷ್ಟೇ ಅಲ್ಲದೆ ಅವನು, 01.10.2009 ರಂದು ಇದ್ದಂತೆ ಆಪಾದಿತನ ಮಾನಸಿಕ ಸ್ಥಿತಿಗತಿ ಹೇಗಿತ್ತು ಎಂಬುದನ್ನು ಹೇಳಲು ಸಾಧ್ಯವಿಲ್ಲವೆಂದು ಹೇಳಿಕೆ ನೀಡಿದ್ದಾನೆ. ಇಷ್ಟನ್ನು ಬಿಟ್ಟರೆ, ಈ ಸಾಕ್ಷಿದಾರನ ಬಾಯಿಂದ ಬೇರೇನೂ ಹೊರಬಿದ್ದಿಲ್ಲ.

18. ಸಂಪೂರ್ಣ ಸಾಕ್ಷ್ಯ ಮತ್ತು ಅಪೀಲುದಾರ–ಆಪಾದಿತನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದಗಳನ್ನು ಪರಿಶೀಲಿಸಿದ ಮೇಲೆ, ಅಪೀಲುದಾರ–ಆಪಾದಿತನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದವು, ಮೃತರ ಸಾವು, ಒಂದು ಹತ್ಯೆಯಾಗಿದ್ದರೂ, ಆಪಾದಿತನು, ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಮೇರೆಗಿನ ಪ್ರಯೋಜನವನ್ನು ಪಡೆದುಕೊಳ್ಳಲು ಹಕ್ಕುಳ್ಳವನಾಗಿರುವನು ಎಂಬುದಾಗಿದೆ. ನಾವು ಭಾರತ ದಂಡ ಸಂಹಿತೆಯ 84ನೇ ಪ್ರಕರಣವನ್ನು ಹತ್ತಿರದಿಂದ ಅವಲೋಕಿಸಿದರೆ, ಇದು, ಸಾಮಾನ್ಯ ವಿನಾಯಿತಿಗಳ ಅಡಿಯಲ್ಲಿ ಬರುತ್ತದೆ.

ಯಾರೇ ವ್ಯಕ್ತಿ ಯಾವುದೇ ಅಪರಾಧ ಮಾಡಿದ ಆಪಾದಿತನಾದಾಗ, ಸದರಿ ಸನ್ನಿವೇಶಗಳು ಇರುವುದನ್ನು ರುಜುವಾತುಪಡಿಸುವ ಹೊಣೆಗಾರಿಕೆ ಮತ್ತು ಭಾರತ ದಂಡ ಸಂಹಿತೆಯಲ್ಲಿ ನಮೂದಿಸಲಾದಂಥ ಯಾವುದೇ ಒಂದು ಸಾಮಾನ್ಯ ವಿನಾಯಿತಿಯೊಳಗೆ ಪ್ರಕರಣವನ್ನು ತರುವ ಹೊಣೆಗಾರಿಕೆಯು, ಭಾರತೀಯ ಸಾಕ್ಷ್ಯ ಅಧಿನಿಯಮದ 105ನೇ ಪ್ರಕರಣದ ಪ್ರಕಾರ ಆ ವಾದವನ್ನು ತೆಗೆದುಕೊಳ್ಳುವ ವ್ಯಕ್ತಿಯ ಮೇಲಿರುತ್ತದೆ. ನಾವು ಭಾರತೀಯ ಸಾಕ್ಷ್ಯ ಅಧಿನಿಯಮದ 101ನೇ ಪ್ರಕರಣವನ್ನು ನೋಡಿದರೆ, ಅವನು ಒತ್ತಿಹೇಳುವ ಸಂಗತಿಗಳು ಇರುವುದನ್ನು ಆಧರಿಸಿ ಅವಲಂಬಿಸಿದ ಯಾವುದೇ ಕಾನೂನಿನ ಹಕ್ಕು ಅಥವಾ ಹೊಣೆಗಾರಿಕೆಯ ಬಗ್ಗೆ ಯಾವುದೇ ನ್ಯಾಯಾಲಯ ತೀರ್ಪು ನೀಡುವುದನ್ನು ಯಾರೇ ಒಬ್ಬರು ಬಯಸುವುದನ್ನು ಇದು ನಮೂದಿಸುತ್ತದೆ. ಇರುವ ಆ ಸಂಗತಿಗಳನ್ನು ರುಜುವಾತುಪಡಿಸಲೇಬೇಕು. ಹಿಂದೆ ಹೇಳಲಾದ ಕಾನೂನಿನ ಪ್ರಸ್ತಾಪವನ್ನು ದೃಷ್ಟಿಯಲ್ಲಿಟ್ಟುಕೊಂಡು, ಬುದ್ಧಿಭ್ರಮಣೆಯನ್ನು ರುಜುವಾತುಪಡಿಸುವ ಹೊಣೆ ಆಪಾದಿತನ ಮೇಲಿರುತ್ತದೆ ಹಾಗೂ ಅವನ ಮೇಲಿರುವ ರುಜುವಾತಿನ ಹೊಣೆಯು, ಸಿವಿಲ್ ವ್ಯವಹರಣೆಗಳ ಪಕ್ಷಕಾರನ ಮೇಲೆ ಇರುವಷ್ಟು ಹೆಚ್ಚಾಗಿರುವುದಿಲ್ಲ. ಮಾನ್ಯ ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರು, ಆಪಾದಿತನು, ತಾನು ಆಪಾದಿತ ಘಟನೆ ನಡೆದ ದಿನಾಂಕ ಮತ್ತು ಸಮಯದಲ್ಲಿ ಇದ್ದಂತೆ ತನಗೆ ಬುದ್ಧಿವಿಕಲ್ಪವಾಗಿತ್ತು ಎಂಬ ಸಂಗತಿಯನ್ನು ಆಪಾದಿತನು ರುಜುವಾತುಪಡಿಸಲೇಬೇಕು ಎಂದು ವಾದಿಸಿದ್ದರೂ ಕೂಡ ಕಾನೂನು ಸಮ್ಮತ ಬುದ್ಧಿಭ್ರಮಣೆಯ ವಾದಪತ್ರವನ್ನು ಮಂಡಿಸುವಾಗ, ನ್ಯಾಯಾಲಯವು, ಆಪಾದಿತನು ಅಪರಾಧಮಾಡುವ ಸಮಯದಲ್ಲಿ ಮಾನಸಿಕ ಅಸ್ವಸ್ಥತೆಯ ಕಾರಣದಿಂದ, ಕೃತ್ಯದ ಸ್ವರೂಪವನ್ನು ಅರಿಯಲು ಅಸಮರ್ಥನಾಗಿದ್ದನೇ ಎಂಬುದನ್ನು ಅಥವಾ ಅವನ ಮಾಡಿದ ತಪ್ಪು ಅಥವಾ ಕಾನೂನಿಗೆ ವಿರುದ್ಧವಾಗಿ ಏನನ್ನು ಮಾಡಿದ್ದನು ಎಂಬುದನ್ನು ಪರಿಗಣಿಸಬೇಕು. ಆಪಾದಿತನ ಮನಸ್ಸಿನ ಸ್ಥಿತಿಯನ್ನು ನಿರ್ಧರಿಸುವುದಕ್ಕೆ ಸಂಬಂಧಪಟ್ಟಂತೆ ನಿರ್ಣಾಯಕ ಸಮಯದ ಗಳಿಗೆಯು, ಅಪರಾಧ ನಡೆದಾಗ ಇದ್ದ ಸಮಯವಾಗಿರುತ್ತದೆ. ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಪ್ರಯೋಜನಕ್ಕೆ ಹಕ್ಕುಳ್ಳವರಾಗುವರು ಎಂಬ ಬಗೆಗಿನ ಮನಸ್ಸಿನ ಅಂಥ ಸ್ಥಿತಿಯಲ್ಲಿ ಆಪಾದಿತನು ಇದ್ದನೇ ಎಂಬುದನ್ನು

ಅಪರಾಧ ನಡೆದ ಪೂರ್ವದಲ್ಲಿರುವ ಜೊತೆಗಿರುವ ಮತ್ತು ಅನುಸರಿಸಿರುವ ಸನ್ನಿವೇಶಗಳಿಂದ ಮಾತ್ರ ರುಜುವಾತುಪಡಿಸಬಹುದು. ಕಾನೂನಿನ ಈ ಪ್ರಸ್ತಾಪವನ್ನು, ***ದಹ್ಯಾಭಾಯಿ ಛಗನ್‌ಭಾಯಿ ಟಕ್ಕರ್ –ವಿರುದ್ಧ– ಗುಜರಾತ್ ರಾಜ್ಯ,*** ಪ್ರಕರಣದಲ್ಲಿ (ಮೇಲೆ ಉದ್ಧರಿಸಲಾದ) ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ್ದು, ಅದರಲ್ಲಿ, 9ನೇ ಕಂಡಿಕೆಯಲ್ಲಿ ಇದನ್ನು ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:–

> *"9. ಕಾನೂನು ಸಮ್ಮತ ಬುದ್ಧಿಭ್ರಮಣೆಯ ವಾದವನ್ನು ಮಂಡಿಸುವಾಗ, ನ್ಯಾಯಾಲಯವು ಆಪಾದಿತನು ಅಪರಾಧ ಮಾಡುವ ಸಮಯದಲ್ಲಿ ಮಾನಸಿಕ ಅಸ್ವಸ್ಥತೆಯ ಕಾರಣದಿಂದ ಕೃತ್ಯದ ಸ್ವರೂಪವನ್ನು ಅರಿಯಲು ಅಸಮರ್ಥನಾಗಿದ್ದನೇ ಎಂಬುದನ್ನು ಅಥವಾ ಅವನು ಎಸಗಿದ ತಪ್ಪು ಅಥವಾ ಕಾನೂನಿನ ವಿರುದ್ಧವಾಗಿ ಏನನ್ನು ಮಾಡಿದ್ದನು ಎಂಬುದನ್ನು ಪರಿಗಣಿಸಬೇಕು. ಆಪಾದಿತನ ಮನಸ್ಸಿನ ಸ್ಥಿತಿಯನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದ ನಿರ್ಣಾಯ ಸಮಯದ ಗಳಿಗೆಯು, ಅಪರಾಧ ನಡೆದಾಗ ಇದ್ದ ಸಮಯವಾಗಿರುತ್ತದೆ. ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಪ್ರಯೋಜನಕ್ಕೆ ಹಕ್ಕುಳ್ಳವನಾಗುವನು ಎಂಬ ಬಗೆಗಿನ ಮನಸ್ಸಿನ ಅಂಥ ಸ್ಥಿತಿಯಲ್ಲಿ ಆಪಾದಿತನು ಇದ್ದನೇ ಎಂಬುದನ್ನು ಅಪರಾಧ ನಡೆದ ಪೂರ್ವಭಾವದಲ್ಲಿರುವ, ಜತೆಗಿರುವ ಮತ್ತು ಅನುಸರಿಸಿರುವ ಸನ್ನಿವೇಶಗಳಿಂದ ಮಾತ್ರವೇ ರುಜುವಾತುಪಡಿಸಬಹುದು.*

19. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೇಲಿನ ನಿರ್ಣಯವನ್ನು ಪರಿಶೀಲಿಸಿದ ಮೇಲೆ, ಇದು, ಅಪರಾಧ ನಡೆದ ನಿರ್ದಿಷ್ಟ ದಿನಾಂಕ ಮತ್ತು ಸಮಯವನ್ನು ನೋಡಬಾರದು, ಆದರೆ, ಅಪರಾಧ ನಡೆದುದಕ್ಕೆ ಪೂರ್ವಭಾವಿಯಾಗಿರುವ, ಜತೆಗಿರುವ ಮತ್ತು ಅನುಸರಿಸಿರುವ ಸನ್ನಿವೇಶಗಳನ್ನು ಕೂಡ ನೋಡಬಹುದಾಗಿದೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಈ ಹಿನ್ನೆಲೆಯಲ್ಲಿ, ಪ್ರತಿವಾದಿ ಸಾಕ್ಷ್ಯ–1, ಸುರೇಶ್ ಬಡದ್‌ಮತ್‌ರವರ ಸಾಕ್ಷ್ಯವನ್ನು ನೋಡಿದರೆ, ಪ್ರಶ್ನಿತ ಘಟನೆಗೂ ಮೊದಲು,

ಆಪಾದಿತನು ಸದರಿ ಬುದ್ಧಿಭ್ರಮಣೆಗೆ ಸಂಬಂಧಿಸಿದ ಚಿಕಿತ್ಸೆಪಡೆದುಕೊಳ್ಳುತ್ತಿದ್ದು, ಈ ಘಟನೆಯ ನಿಕಟೋತ್ತರದಲ್ಲಿಯೂ ಹಾಗೂ ತರುವಾಯದ ನಂತರವೂ, ಅವನು ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದನು ಎಂಬ ಸಂಗತಿಯನ್ನು ಇದು ಸ್ಪಷ್ಟವಾಗಿ ಸೂಚಿಸುತ್ತದೆ. ಪ್ರತಿವಾದಿ ಸಾಕ್ಷ್ಯ–1ರ ಸಾಕ್ಷ್ಯವೂ ಕೂಡ, ಆಪಾದಿತನನ್ನು ವೈದ್ಯಕೀಯ ಸಲಹೆಗೆ ವಿರುದ್ಧವಾಗಿ ಬಿಡುಗಡೆಗೊಳಿಸಲಾಗಿತ್ತು ಎಂಬ ಸಂಗತಿಯನ್ನು ಹೊರಗೆಡಹುತ್ತದೆ. ಆಪಾದಿತನ ತಾಯಿಯೂ ಕೂಡ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದಳು ಎಂಬ ಸಂಗತಿಯನ್ನೂ ಕೂಡ ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ, ಈ ಬಗ್ಗೆ ಸ್ಪಷ್ಟವಾಗಿರುವ ಒಂದು ಅಂಶ ಯಾವುದೆಂದರೆ ಘಟನೆಯ ಮೊದಲು ಮತ್ತು ನಂತರ ಆಪಾದಿತನು ಮಾನಸಿಕ ಅಸ್ವಸ್ಥನಾಗಿದ್ದುದು ಸಂಬಂಧಪಡುವ ಸಂಗತಿಯಾಗಿದೆ. ಪ್ರಕರಣದ ಈ ಸನ್ನಿವೇಶಗಳಿಂದ ಅಪೀಲುದಾರನು, ಸ್ಪಷ್ಟವಾಗಿ ಸಂಬಂಧಪಟ್ಟ ಸಮಯದಲ್ಲಿ ಭ್ರಮೆಯಲ್ಲಿದ್ದನೆಂಬ ಊಹೆಯನ್ನು ಯುಕ್ತವಾಗಿ ಮಾಡಬಹುದಾಗಿದೆ. ಹಾಜರುಪಡಿಸಲಾದ ಸಾಕ್ಷ್ಯವೂ ಕೂಡ, ಆಪಾದಿತನು ಮಾನಸಿಕ ಕಾಯಿಲೆಯಾಗಿರುವ ಪ್ಯಾರಾನಾಯ್ಡ್ ಸ್ಕಿಜೊಫ್ರೇನಿಯಾ ಕಾಯಿಲೆಯಿಂದ ಬಳಲುತ್ತಿದ್ದನು ಎಂಬ ಸಂಗತಿಯನ್ನು ಸೂಚಿಸುತ್ತದೆ. ಪ್ಯಾರಾನಾಯ್ಡ್ ಸ್ಕಿಜೊಫ್ರೇನಿಯಾ ಎಂದರೇನು ಯಾವಾಗ ಇದು ಪ್ರಾರಂಭವಾಗಿದೆ, ಇದರ ಗುಣಲಕ್ಷಣಗಳೇನು ಈ ಕಾಯಿಲೆಯಿಂದಾಗುವ ಅಪಾಯಗಳೇನು ಎಂಬುದು ಪ್ರಶ್ನೆಯಾಗಿದೆ. ಬಹುತೇಕ ಹೆಚ್ಚಿನ ಪ್ರಕರಣಗಳಲ್ಲಿ ಪ್ಯಾರಾನಯ್ಡ್ ಸ್ಕಿಜೊಫ್ರೇನಿಯಾವು 4ನೇ ದಶಕದಲ್ಲಿ ಪ್ರಾರಂಭವಾಗಿದ್ದು, ಗುಪ್ತವಾಗಿ ವೃದ್ಧಿಗೊಂಡಿದೆ. ಸಂಶಯಪಡುವುದು ಮೊದಲಿನ ಹಂತದ ರೋಗದ ಗುಣಲಕ್ಷಣ ಚಿಹ್ನೆಯಾಗಿದೆ. ಸಂಬಂಧಪಟ್ಟ ಕಲ್ಪನೆಗಳು ಉಂಟಾಗಿದ್ದು, ಅವು ಕ್ರಮೇಣ ಅನುಮಾನಗಳ ಭ್ರಮೆಗಳಲ್ಲಿ ವೃದ್ಧಿಯಾಗುತ್ತವೆ. ಶ್ರವ್ಯ ಹುಸಿಭಾವನೆಗಳು ಇದನ್ನು ಅನುಸರಿಸುತ್ತವೆ. ಪ್ರಾರಂಭದಲ್ಲಿ ಇವು, ಕಿವಿಗಳಲ್ಲಿ ಧ್ವನಿಗಳಂತೆ ಅಥವಾ ಶಬ್ದಗಳಂತೆ ಪ್ರಾರಂಭವಾಗುತ್ತವೆ. ಆದರೆ, ತದನಂತರ ಮೊದಮೊದಲು ಭ್ರಮೆಗಳು ಅಸ್ಪಷ್ಟವಾಗಿರುತ್ತವೆ ಆದರೆ ಅವು ಕ್ರಮೇಣ ಬೇರೂರಿ ಸ್ಪಷ್ಟವಾಗುತ್ತಾ ಹೋಗುತ್ತವೆ. ಯಾರೋ ವ್ಯಕ್ತಿ ಅಥವಾ ಯಾರೋ ಅತಿಮಾನವನನ್ನು ಅವನು ಅನುಮಾನಪಡುತ್ತಿರುವುದನ್ನು ರೋಗಿಯು ನಂಬಲು ಕಾರಣವಾಗುತ್ತದೆ.

ಅವನು, ತನ್ನ ಆಹಾರವು ವಿಷವಾಗುತ್ತಿದೆಯೆಂದು, ಯಾವುದೋ ಹಾನಿಕರ ಅನಿಲವನ್ನು ತನ್ನ ಕೊಠಡಿಗೆ ಊದುತ್ತಿರುವರೆಂದು ನಂಬುತ್ತಾನೆ ಮತ್ತು ಜನರು, ನನ್ನನ್ನು ವಿನಾಶಗೊಳಿಸಲು ನನ್ನ ವಿರುದ್ಧ ಪಿತೂರಿ ನಡೆಸುತ್ತಿರುವರೆಂದು ನಂಬುತ್ತಾನೆ. ಸಾಮಾನ್ಯ ಸಂವೇದನೆ ಕೊಡುವ ತೊಂದರೆಗಳು, ಹುಸಿಕಲ್ಪನೆಗಳನ್ನು ಹುಟ್ಟಿಸಿ ಅವು ಸಂಮೋಹನ, ವಿದ್ಯುಚ್ಛಕ್ತಿ, ನಿಸ್ತಂತು, ಟೆಲಿಗ್ರಫಿ ಅಥವಾ ಪರಮಾಣು ಏಜೆನ್ಸಿಗಳ ಪರಿಣಾಮಗಳಿಗೆ ಕಾರಣವಾಗುತ್ತವೆ. ಈ ವೇದನೆಯುಕ್ತ ಮತ್ತು ಒಗ್ಗದ ಕಲ್ಪಿತ ಭಾವನೆಗಳು ಮತ್ತು ಭ್ರಮೆಗಳ ಕಾರಣದಿಂದ ರೋಗಿಯು ಸಿಟ್ಟಿಗೆದ್ದು ಕೆರಳುತ್ತಾನೆ. ಹಲವಾರು ಜನ ಇವರಿಗೆ ವಿರೋಧಿಗಳಾಗುವುದರಿಂದ ಅವನಿಗೆ ಕೇಡು ಬಗೆಯಲು ಆಸಕ್ತರಾಗುವರು, ಅವನು ತಾನು ತುಂಬಾ ಪ್ರಮುಖ ವ್ಯಕ್ತಿಯಾಗಲೇಬೇಕೆಂಬ ನಂಬಿಕೆಗೆ ಬರುತ್ತಾನೆ. ಹೀಗಾಗಿ, ಭ್ರಮೆಯ ಸ್ವರೂಪವು, ಕಿರುಕುಳಗಳಿಂದ ಅತಿಯಾದ ರೀತಿಗಳಿಗೆ ಬದಲಾಗಬಹುದು. ಅವನು ಈ ಹೆಚ್ಚಿನ ಶಕ್ತಿಯುತ ಮತ್ತು ಅಪಾರವಾದ ಭ್ರಮೆಗಳಿಗೆ ಅವಕಾಶ ಕೊಡುವನು, ಸಾಮಾನ್ಯವಾಗಿ, ದರ್ಪ ಮತ್ತು ಉದ್ಧಟರೀತಿಯಲ್ಲಿ ವರ್ತಿಸುತ್ತಾರೆ. ರೋಗಿಯು ಸಾಮಾನ್ಯವಾಗಿ ಜ್ಞಾಪಕವಿಟ್ಟಿರುತ್ತಾನೆ ಮತ್ತು ನೆಲೆಯರಿವಿರುತ್ತದೆ ಮತ್ತು ಯಾವ ಭ್ರಮೆಯಿಂದ ಅವನು ನರಳುತ್ತಿರುವನೋ ಅದರ ನಿರ್ದಿಷ್ಟ ರೀತಿಗೆ ಸಂಭಾಷಣೆ ನಡೆಸುವವರೆಗೂ ಬುದ್ಧಿಭ್ರಮಣೆಯ ಸೂಚನೆಗಳನ್ನು ತೋರಿಸುವುದಿಲ್ಲ. ಭ್ರಮೆಯು ಅವನ ನಡವಳಿಕೆಗೆ ಬಾಧಕವಾದ ಅವನು, ತನಗೆ ತಾನೆ ಹಾಗೂ ಇತರರಿಗೆ ಆಗಾಗ ಅಪಾಯದ ಮೂಲವಾಗುತ್ತಾನೆ. (ಮೋದಿಯವರ ವೈದ್ಯಕೀಯ ನ್ಯಾಯಶಾಸ್ತ್ರ ಮತ್ತು ವಿಷಶಾಸ್ತ್ರ, 22ನೇ ಆವೃತ್ತಿ)

20. ಅಷ್ಟೇ ಅಲ್ಲದೆ ಮೋದಿಯವರ ಪ್ರಕಾರ ಸ್ಕಿಜೊಫ್ರೇನಿಯಾಕ್ಕೆ ಕಾರಣ ಇನ್ನೂ ತಿಳಿದುಬಂದಿಲ್ಲ ಆದರೆ ಅನುವಂಶೀಯತೆಯ ಪಾತ್ರ ವಹಿಸುತ್ತದೆ. ಕಿರಿಕಿರಿಯಾಗುವುದು ಮತ್ತು ಕೆರಳುವಿಕೆ ಕಾಯಿಲೆಯನ್ನುಂಟುಮಾಡುತ್ತವೆ. ಭ್ರಮೆಯು ರೋಗಿಯ ವರ್ತನೆಯ ಮೇಲೆ ಪರಿಣಾಮಬೀರಿ, ಅವನು, ತನಗೆ ಮತ್ತು ಇತರರಿಗೆ ಅಪಾಯದ ಮೂಲವಾಗುತ್ತಾನೆ.

21. ಪ್ರತಿವಾದಿ ಸಾಕ್ಷ್ಯ–1ರ ವೈದ್ಯಕೀಯ ಸಾಕ್ಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಮತ್ತು ಪ್ರಕರಣದ ಸನ್ನಿವೇಶಗಳನ್ನು ಅವಲೋಕಿಸಿ, ಅಪೀಲುದಾರ–ಆಪಾದಿತನು ಸಂಬಂಧಪಟ್ಟ ಸಮಯದಲ್ಲಿ ಭ್ರಮೆಯಲ್ಲಿದ್ದನು ಮತ್ತು ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಮೇರೆಗಿನ ಪ್ರಯೋಜನವನ್ನು ಪಡೆದುಕೊಳ್ಳಲು ಹಕ್ಕುಳ್ಳವನಾಗಿರುವನು ಎನ್ನುವ ಊಹೆಯನ್ನು ಯುಕ್ತವಾಗಿ ಮಾಡಬಹುದು. ಕಾನೂನಿನ ಈ ಪ್ರಸ್ತಾಪವನ್ನು, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ***ಶ್ರೀಕಾಂತ್ ಆನಂದ್‌ರಾವ್ ಭೋಸಲೆ –ವಿರುದ್ಧ– ಮಹಾರಾಷ್ಟ್ರ ರಾಜ್ಯ*** (ಮೇಲೆ ಉದ್ಧರಿಸಲಾದ) ಪ್ರಕರಣದಲ್ಲಿ, ವಿಧಿಸಿದ್ದು, ಇದರಲ್ಲಿ ಕಂಡಿಕೆ–9 ಮತ್ತು 20ರಲ್ಲಿ, ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:–

> *"9. ಹಿಂದೆ ಹೇಳಲಾದ ಸಾಕ್ಷ್ಯದಿಂದ, ಮನೋರೋಗವಿರುವ ಕುಟುಂಬದ ಇತಿಹಾಸ ಇರುವುದೆಂಬುದನ್ನು ರುಜುವಾತುಪಡಿಸಲಾಗಿದೆ. ಅಪೀಲುದಾರನ ತಂದೆಯು 65ನೇ ವಯಸ್ಸಿನಲ್ಲಿ ಕಾಯಿಲೆಯಿಂದ ಬಳಲುತ್ತಿದ್ದು, 1989ರಲ್ಲಿ ಅವನ ತಂದೆಯು ಮನೆಯಿಂದ ಓಡಿಹೋಗಿದ್ದನು.*
>
> *xxx xxx xxx xxx*
> *xxx xxx xxx xxx*
>
> *20. ಶ್ರೀ ಅರುಣ್ ಪೆಡ್ನೆಕರ್‌ರವರು, ಅಪೀಲುದಾರನು ಓಡಿಹೋಗಲು ಯಾವುದೇ ಪ್ರಯತ್ನ ಮಾಡಿರಲಿಲ್ಲವೆಂಬ ಸಂಗತಿಗೇ ಮಾತ್ರ ಅಥವಾ ಹಗಲುಹೊತ್ತಿನಲ್ಲಿ ಅವನು ಅಪರಾಧವನ್ನು ಮಾಡಿದ್ದ ಅದನ್ನು ಅವನು ಮುಚ್ಚಿಟ್ಟಿರಲಿಲ್ಲ ಅಥವಾ ಅವನ ಹೆಂಡತಿಯನ್ನು ಕೊಲ್ಲುವ ಪ್ರೇರಣೆ ತುಂಬಾ ದುರ್ಬಲವಾಗಿತ್ತು ಎಂಬುದನ್ನು ವಾದಿಸಲು ಶೆರಾಲಿ ವಾಲಿ ಮಹಮದ್ –ವಿರುದ್ಧ– ಮಹಾರಾಷ್ಟ್ರ ರಾಜ್ಯ ಪ್ರಕರಣವನ್ನು ಅವಲಂಬಿಸಿದ್ದು, ಕೃತ್ಯ ನಡೆದ ಸಮಯದಲ್ಲಿ ಅಪೀಲುದಾರನು ಮಾನಸಿಕ ಅಸ್ವಸ್ಥತೆಯಿಂದ*

*ಬಳಲುತ್ತಿದ್ದನು ಅಥವಾ ಅವನು ಅಪರಾಧವನ್ನು ಎಸಗಲು ಯಾವುದೇ ಅಗತ್ಯ ಅಪರಾಧಿಕ ಮನಸ್ಸನ್ನು ಹೊಂದಿರಲಿಲ್ಲ ಎಂಬುದನ್ನು ಸೂಚಿಸುವುದಿಲ್ಲ. ಈ ಸಂಗತಿಗಳೇ ಅಸ್ವಸ್ಥತೆಯನ್ನು ಸೂಚಿಸುವುದಿಲ್ಲ ಎಂಬುದು ಸರಿಯಾಗಿದ್ದು, ಪ್ರಸ್ತುತ ಪ್ರಕರಣದಲ್ಲಿ, ಅಪೀಲುದಾರನು ಪ್ಯಾರಾನಾಯ್ಡ್ ಸ್ಕಿಜೊ಼ಫ್ರೇನಿಯಾದಿಂದ ಬಳಲುತ್ತಿದ್ದನೆಂಬುದನ್ನು ರುಜುವಾತುಪಡಿಸಲು ದಾಖಲೆಯಲ್ಲಿರುವ ಸಾಕ್ಷ್ಯದ ಹಿನ್ನೆಲೆಯಲ್ಲಿ ಹಿಂದೆ ಹೇಳಲಾದ ಸಂಗತಿಗಳಷ್ಟೇ ಅಲ್ಲದೆ ಒಟ್ಟು ಸನ್ನಿವೇಶಗಳು ಕಂಡುಬರುತ್ತವೆ. ಘಟನೆ ನಡೆಯುವ ಮೊದಲು ಮತ್ತು ತದನಂತರದ ಮಾನಸಿಕ ಅಸ್ವಸ್ಥತೆಯು ಸಂಬಂಧಪಟ್ಟ ಸಂಗತಿಯಾಗಿದೆ. ಪ್ರಕರಣದ ಸನ್ನಿವೇಶಗಳಿಂದ ಸ್ಪಷ್ಟವಾಗಿ, ಅಪೀಲುದಾರನು ಸಂಬಂಧಪಟ್ಟ ಸಮಯದಲ್ಲಿ ಭ್ರಮೆಯಲ್ಲಿದ್ದನೆಂಬ ಕಲ್ಪನೆಯನ್ನು ಯುಕ್ತವಾಗಿ ಮಾಡಬಹುದು. ಅವನು ಅಸ್ವಸ್ಥತೆಯಲ್ಲಿದ್ದನು ಯಾವ ಕೋಪದ ತತ್ವದಲ್ಲಿ ನಂಬಿಕೆಯನ್ನು ಇಡಲಾಗಿದೆಂಬೋ ಆ ತತ್ವವನ್ನು ಸ್ಕಿಜೊ಼ಫ್ರೇನಿಯಾದಿಂದ ಆಗಿದೆ ಎಂಬುದನ್ನು ತಳ್ಳಿ ಹಾಕಲಾಗುವುದಿಲ್ಲ. ಅಪೀಲುದಾರನ ಮೇಲಿನ ಹೊಣೆಯ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ನಾವು, ಅಪೀಲುದಾರನು, ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಪ್ರಯೋಜನವನ್ನು ಪಡೆದುಕೊಳ್ಳುವ ಸಲುವಾಗಿ ಸಾಕ್ಷ್ಯ ಅಧಿನಿಯಮದ 105ನೇ ಪ್ರಕರಣದಿಂದ ಅಗತ್ಯಪಡಿಸಲಾದಂಥ ಸನ್ನಿವೇಶಗಳಿರುವುದನ್ನು ರುಜುವಾತುಪಡಿಸಿದ್ದಾನೆ ಎಂಬುದು ನಮ್ಮ ಅಭಿಪ್ರಾಯವಾಗಿದೆ. ಕೋಪದ ಅತಿರೇಕದ ಕಾರಣದಿಂದ ಅಪರಾಧ ನಡೆದಿದೆಯೆಂದು ಅಭಿಪ್ರಾಯಪಡಲು ನಮಗೆ ಸಾಧ್ಯವಾಗುತ್ತಿಲ್ಲ. ಅಪರಾಧ ನಡೆದ ಸಮಯದಲ್ಲಿ ಅಪೀಲುದಾರನು ಮಾನಸಿಕ ಅಸ್ವಸ್ಥತೆಯ ಕಾರಣದ ಕೃತ್ಯದ ಸ್ವರೂಪ ತಿಳಿಯಲು ಅಸಮರ್ಥನಾಗಿದ್ದಾನೆಯೆನ್ನುವ ಯುಕ್ತ ಸಂದೇಹವಿದೆ. ಹೀಗಾಗಿ ಭಾರತ ದಂಡ ಸಂಹಿತೆಯ 84ನೇ*

*ಪ್ರಕರಣದ ಪ್ರಯೋಜನಕ್ಕೆ ಅವನು ಹಕ್ಕುಳ್ಳವನಾಗುವನು. ಅಪೀಲುದಾರನ ಅಪರಾಧನಿರ್ಣಯ ಮತ್ತು ಶಿಕ್ಷೆಯನ್ನು ಬೆಂಬಲಿಸಲು ಸಾಧ್ಯವಿಲ್ಲ."*

22. ಮೇಲೆ ಹೇಳಲಾದ ನಿರ್ಣಯವನ್ನು ಪರಿಶೀಲಿಸಿದ ಮೇಲೆ ಸದರಿ ನಿರ್ಣಯದಲ್ಲಿರುವ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಪ್ರಸ್ತುತ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳಿಗೆ ಯುಕ್ತವಾಗಿ ಅನ್ವಯಿಸಬಹುದು. ಆ ಹಿನ್ನೆಲೆಯಲ್ಲಿ ನಾವು, ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಪ್ರಯೋಜನಕ್ಕೆ ಅಪೀಲುದಾರನು ಹಕ್ಕುಳ್ಳವನಾಗುವನು ಎಂದು ಅಭಿಪ್ರಾಯಪಡುತ್ತೇವೆ. ಈ ನ್ಯಾಯಾಲಯವು, ***ಶ್ರೀ ಸುಧಾಕರ –ವಿರುದ್ಧ– ರಾಜ್ಯ ಪೋಲೀಸು ಪರಿವೀಕ್ಷಕರ ಮೂಲಕ ಮಂಗಳೂರು ಉತ್ತರ***[4], ಸದೃಶ ಅಭಿಪ್ರಾಯವನ್ನು ತಳೆದಿದ್ದು, ಭಾರತ ದಂಡ ಸಂಹಿತೆಯ 84ನೇ ಪ್ರಕರಣದ ಮೇರೆಗೆ ಆಪಾದಿತನಿಗೆ ಪ್ರಯೋಜನವನ್ನು ವಿಸ್ತರಿಸಲಾಗಿದೆ.

23. ಆಪಾದಿತನು ಆಪಾದಿತ ಅಪರಾಧವನ್ನು ಎಸಗಿರುವನೆಂಬ ನಿರ್ಣಯಕ್ಕೆ ಬಂದಿದ್ದರೂ ಪ್ರತಿವಾದಿ ಸಾಕ್ಷ್ಯ–18 ಸಾಕ್ಷ್ಯದಿಂದ ಮತ್ತು ಈ ಬಗ್ಗೆ ಹಾಜರುಪಡಿಸಲಾದ ಇತರ ಸಾಕ್ಷ್ಯಧಾರಗಳಿಂದ ಆಪಾದಿತನು, ತಾನು ಆಪಾದಿತ ಅಪರಾಧ ನಡೆದ ಸಮಯದಲ್ಲಿ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದೇನೆಂದು ಮತ್ತು ಕೃತ್ಯದ ಸ್ವರೂಪ ಅರಿಯಲು ಅಸಮರ್ಥನಾಗಿದ್ದೆನೆಂದು ರುಜುವಾತುಪಡಿಸಿರುವನೆಂಬುದನ್ನು ಗುರುತಿಸಿದ್ದೇವೆ. ಪ್ರಕರಣ ಹೀಗಿರುವಾಗ, ಸಾಮಾನ್ಯ ವಿನಾಯಿತಿಗಳು ಬರುತ್ತವೆ. ಮಾನಸಿಕ ಅಸ್ವಸ್ಥನಾಗಿರುವ ಕಾರಣದಿಂದ ಅದನ್ನು ಮಾಡುವ ಸಮಯದಲ್ಲಿ ಕೃತ್ಯದ ಸ್ವರೂಪವನ್ನು ತಿಳಿಯಲು ಅಸಮರ್ಥನಾಗಿರುವ ವ್ಯಕ್ತಿಯು, ಮಾಡಿರುವ ಅಪರಾಧ ಯಾವುದು ತಪ್ಪು ಅಥವಾ ಕಾನೂನಿಗೆ ವಿರುದ್ಧವಾದುದನ್ನು ಅವನು ಮಾಡಿರುವುದು ಯಾವುದೂ ಅಪರಾಧವಾಗುವುದಿಲ್ಲ. ಆದುದರಿಂದ, ಆಪಾದಿತ–ಅಪೀಲುದಾರನು ಇಲ್ಲಿ ಖುಲಾಸೆಗೊಳಿಸಲು ಹಕ್ಕುಳ್ಳವನಾಗುವನು.

4. ಕ್ರಿ.ಅ.ಸಂ. 502/2012, ದಿನಾಂಕ 15–3–2016.

24. ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಆದೇಶವನ್ನು ನಾವು ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಪರಿಶೀಲಿಸಬೇಕು. ಅಧಿವಿಚಾರಣಾ ನ್ಯಾಯಾಲಯವು, ನ್ಯಾಯದ ವಿಫಲತೆಯಿಂದ ಆಗಿರುವ ಅದರ ಸರಿಯಾದ ದೃಷ್ಟಿಕೋನದಲ್ಲಿನ ಹಿಂದೆ ಹೇಳಲಾದ ಸಂಗತಿಯನ್ನು ಪರಿಗಣಿಸಿರುವುದಿಲ್ಲ. ಮೇಲೆ ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯವನ್ನು ಸವಿವರವಾಗಿ ಚರ್ಚಿಸಲಾದಂತೆ, ಮರುಮೌಲ್ಯಮಾಪನ ಮಾಡಿದ ಮೇಲೆ ನಾವು, ನೀಡಲಾದ ಕಾರಣಗಳು ಮತ್ತು ಅಧಿವಿಚಾರಣಾ ನ್ಯಾಯಾಲಯವು ತೆಗೆದುಕೊಂಡ ನಿರ್ಣಯವು ಯುಕ್ತವಾಗಿರುವುದಿಲ್ಲ ಮತ್ತು ಸರಿಯಾಗಿರುವುದಿಲ್ಲ ಎಂಬ ತುಂಬಾ ನಿರ್ದಿಷ್ಟವಾಗಿ ದಾಖಲೆಯಲ್ಲಿರುವ ಸಾಕ್ಷ್ಯದಲ್ಲಿರುವಷ್ಟರಮಟ್ಟಿಗೆ, ವೈದ್ಯ–ಪ್ರತಿವಾದಿ ಸಾಕ್ಷ್ಯದ ಸಾಕ್ಷ್ಯವನ್ನು, ಅಧಿವಿಚಾರಣಾ ನ್ಯಾಯಾಲಯವು, ಅದನ್ನು ಪರಿಗಣಿಸಲೇಬೇಕಾದ ರೀತಿಯಲ್ಲಿ ಯುಕ್ತವಾಗಿ ಪರಿಗಣಿಸಿಲ್ಲ ಮತ್ತು ಮೌಲ್ಯಮಾಪನ ಮಾಡಿಲ್ಲ.

25. ಮೇಲೆ ಹೇಳಲಾದ ಸವಿವರವಾದ ಚರ್ಚೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು, ಅಪೀಲುದಾರನು ಅಪೀಲನ್ನು ಪುರಸ್ಕರಿಸಬೇಕೆನ್ನುವ ಸಲುವಾಗಿ ಮತ್ತು ತನ್ನ ವಿರುದ್ಧ ವಿಧಿಸಲಾದ ಅಪರಾಧಗಳಿಂದ ಅವನನ್ನು ಖುಲಾಸೆಗೊಳಿಸಬೇಕೆನ್ನುವ ಸಲುವಾಗಿ ಮೊಕದ್ದಮೆಯನ್ನು ಹೂಡಿರುವನು ಎಂಬ ಅಭಿಪ್ರಾಯವನ್ನು ಪರಿಗಣಿಸಿರುತ್ತೇವೆ. ಆ ಹಿನ್ನೆಲೆಯಲ್ಲಿ, ಸೆಷನ್ಸ್ ನ್ಯಾಯಾಧೀಶರು ಮತ್ತು ಪ್ರಿಸೈಡಿಂಗ್ ಅಧಿಕಾರಿ ತ್ವರಿತಗತಿ ನ್ಯಾಯಾಲಯ, ಕೊಳ್ಳೇಗಾಲ ದಿನಾಂಕ 5/11.07.2014ರಲ್ಲಿ ನೀಡಿದ ತೀರ್ಪು ಹಾಗೂ ಅಪರಾಧನಿರ್ಣಯದ ಆದೇಶ ಮತ್ತು ಶಿಕ್ಷೆಯನ್ನು ತಳ್ಳಿಹಾಕಲು ತಕ್ಕುದಾಗಿರುತ್ತದೆ. ತದನುಸಾರವಾಗಿ ಈ ಮುಂದಿನದನ್ನು ನಾವು ಹೊರಡಿಸಿದ್ದೇವೆ:–

ನಾವು ಅಪೀಲನ್ನು ಪುರಸ್ಕರಿಸಿ, ಅಧೀನ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಅಪರಾಧನಿರ್ಣಯದ ಆದೇಶವನ್ನು ತಳ್ಳಿಹಾಕಿರುತ್ತೇವೆ. ಅಪೀಲುದಾರ/ಆಪಾದಿತನನ್ನು, ಅವನ ವಿರುದ್ಧ ವಿಧಿಸಲಾದ ಆರೋಪಗಳಿಂದ ಖುಲಾಸೆಗೊಳಿಸಲಾಗಿದೆ.

ನಾವು ಆಪಾದಿತ/ಅಪೀಲುದಾರನನ್ನು ಖುಲಾಸೆಗೊಳಿಸಿದ್ದರೂ ಕೂಡ ನ್ಯಾಯವಾದಿಗಳ ಕರ್ತವ್ಯ ದಂಡ ಪ್ರಕ್ರಿಯಾ ಸಂಹಿತೆಯ 335ನೇ ಪ್ರಕರಣದ ಉಪಬಂಧಗಳ ಹಿನ್ನೆಲೆಯಲ್ಲಿ ಮುಕ್ತಾಯಕ್ಕೆ ಬರುವುದಿಲ್ಲ. ವ್ಯಕ್ತಿಯನ್ನು ಸಂಸ್ಥೆಯಲ್ಲಿ ಇಟ್ಟುಕೊಳ್ಳಲು ಅರ್ಹನಾಗಿದ್ದಾನೆಯೇ ಅಥವಾ ಇಲ್ಲವೆ ಎಂಬುದನ್ನು ನಿರ್ಧರಿಸಲು ಬೆಂಗಳೂರಿನಲ್ಲಿರುವ ನಿಮ್ಹಾನ್ಸ್ ಆಸ್ಪತ್ರೆಗೆ ಅಪೀಲುದಾರ/ಆಪಾದಿತನನ್ನು ಕೊಂಡೊಯ್ಯಲು ಕ್ರಮ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಕಾರಾಗೃಹ ಪ್ರಾಧಿಕಾರಕ್ಕೆ ಈ ಮೂಲಕ ನಿರ್ದೇಶಿಸಲಾಗಿದೆ. ಮುಂದಿನ ಕೆಲವು ಭವಿಷ್ಯದ ಸಮಯದಲ್ಲಿ ವೀಕ್ಷಣೆಯನ್ನು ಮಾಡಿದ ನಂತರ, ಅಪೀಲುದಾರ/ಆಪಾದಿತನು ನಿರ್ದಿಷ್ಟವಾಗಿ ತನಗೆ ಮತ್ತು ಸಮಾಜಗಳೆರಡಕ್ಕೂ ಒಳ್ಳೆಯವನು ಮತ್ತು ಸುರಕ್ಷಿತನಾಗಿರುವನು ಎಂದು ವೈದ್ಯರು ಅಭಿಪ್ರಾಯಪಟ್ಟಾಗ, ಆ ಸಂದರ್ಭದಲ್ಲಿ, ಆಪಾದಿತ/ಅಪೀಲುದಾರನ ಸಂಬಂಧಿಕರಿಗೆ ಮಾಹಿತಿಯನ್ನು ನೀಡಿದ ನಂತರ ಅಪೀಲುದಾರ/ಆಪಾದಿತನನ್ನು ಬಿಡುಗಡೆಗೊಳಿಸಲು ಅವನಿಗೆ ಅದು ಮುಕ್ತವಾಗಿದ್ದು, ಅಧಿವಿಚಾರಣಾ ನ್ಯಾಯಾಲಯವು ಸಂಗತಿಗಳು ಮತ್ತು ಸನ್ನಿವೇಶಗಳನ್ನು ತನ್ನ ಸ್ವತಂತ್ರ ವಿವೇಚನೆಯನ್ನು ಅನ್ವಯಿಸಬೇಕು.

ನಾವು ಮಾನ್ಯ ನ್ಯಾಯಾಲಯ ಮಿತ್ರ ಶ್ರೀ ಎನ್.ಎಸ್. ಸಂಪಂಗಿ ರಾಮಯ್ಯನವರು ನೀಡಿದ ಮೌಲ್ಯಯುತ ನೆರವನ್ನು ಇಲ್ಲಿ ದಾಖಲಿಸುತ್ತೇವೆ. ನಾವು ಮಾನ್ಯ ನ್ಯಾಯಾಲಯ ಮಿತ್ರರವರಿಗೆ ಗೌರವಧನವಾಗಿ 10,000/– (ಹತ್ತು ಸಾವಿರ ರೂಪಾಯಿಗಳು) ರೂ. ಗಳ ಮೊತ್ತವನ್ನು ಸಂದಾಯ ಮಾಡಲು ರಿಜಿಸ್ಟ್ರಿಗೆ ನಿರ್ದೇಶಿಸುತ್ತೇವೆ.

---